ದಂಡಕ-ಒಂದು ಅಧ್ಯಯನ

ಎಂ. ಆರ್. ಚಂದ್ರಮೌಳಿ

ದಂಡಕ—ಒಂದು ಅಧ್ಯಯನ

1977
ಕನ್ನಡ ಸಾಹಿತ್ಯ
ಪರಿಷತ್ಪತ್ರಿಕೆ -

ಎಂ. ಆರ್. ಚಂದ್ರಮೌಳಿ

ದಂಡಕ—ಒಂದು ಅಧ್ಯಯನ

—ಎಂ. ಆರ್. ಚಂದ್ರಮೌಳಿ

ದಂಡಕ ಒಂದು ಮಾಲಾವೃತ್ತ. ಅಕ್ಷರಗಣಬದ್ಧವಾದದ್ದು. 'ದಂಡಕ' ಎಂಬುದು ನೀಳವಾದದ್ದು, ಉದ್ದವಾದದ್ದು ಎಂಬರ್ಥದಲ್ಲಿ ಬಂದಿದೆ. ಪಾದನಿಯಮವುಳ್ಳ ಉತ್ಪಲಮಾಲಾದಿ ವೃತ್ತಗಳಿಗಿಂತಲೂ ಇದು ಹೆಚ್ಚು ಲಂಬಿತ, ದೀರ್ಘ. ದಂಡಕಕ್ಕೆ ಮೊದಲು ಪಾದನಿಯಮವಿತ್ತು. ಮಿತಿಗಳನ್ನು ಕಳೆದು ಅದು ಬೆಳೆದಂತೆಲ್ಲಾ ಪಾದನಿಯಮ ತಪ್ಪಿಹೋಗಿ, ಅಕ್ಷರಗಣಗಳ ದೀರ್ಘಮಾಲೆಯಾಯಿತು. ಪಾದನಿಯಮವಿಲ್ಲದ ದಂಡಕಗಳನ್ನು ಗದ್ಯದಂಡಕಗಳೆಂದೂ ಮಾಲಾದಂಡಕಗಳೆಂದೂ ಕರೆಯುವುದುಂಟು. ಈಗ ಉಪಲಬ್ಧವಿರುವ ದಂಡಕಗಳಿಗೆ ಪಾದನಿಯಮವಿಲ್ಲ. ಒಂದೇ ಬಗೆಯ ಅಕ್ಷರಗಣಗಳು ಓರಣಿಸಿ ದೀರ್ಘವಾಗಿ ಹರಿಯುತ್ತವೆ.

ದಂಡಕಗಳು ವಿಪುಲವಾಗಿ ಕಂಡುಬರುವುದು ಸಂಸ್ಕೃತ ಮತ್ತು ತೆಲುಗು ಸ್ತೋತ್ರ ಸಾಹಿತ್ಯಗಳಲ್ಲಿ ಮಾತ್ರ. ಕನ್ನಡದಲ್ಲಿ ಅಷ್ಟಾಗಿ ಬಳಕೆಯಿಲ್ಲ. ದಂಡಕದ ಲಕ್ಷಣದಲ್ಲಿ ಕೆಲವು ನಿರ್ದಿಷ್ಟ ಅಕ್ಷರಗಣಗಳಲ್ಲೊಂದು ಆದ್ಯಂತವಾಗಿ ಬರಬೇಕೆಂಬ ನಿಯಮವಿದೆ. ಇಂಥ ಗಣಗಳ ಅಕ್ಷರಗಳಲ್ಲಿ ಶೇಕಡ ೬೭ ರಷ್ಟು ಗುರ್ವಕ್ಷರಗಳಾಗಿರುತ್ತವೆ. ಗುರ್ವಕ್ಷರಗಳು ಸಂಸ್ಕೃತ ಮತ್ತು ತೆಲುಗಿನಲ್ಲಿ ಹೆಚ್ಚು. ಅದರಿಂದಾಗಿ ಇವೆರಡು ಭಾಷೆಗಳಲ್ಲೇ ದಂಡಕ ಅತಿಶಯವಾಗಿ ಪ್ರಯೋಗವಾಗಿರುವುದು ಸಹಜ. ಕನ್ನಡದಲ್ಲಿ ಪ್ರಯೋಗವಾಗಿರುವ ಕೆಲವೇ ದಂಡಕಗಳೂ ಶುದ್ಧ ಸಂಸ್ಕೃತದ್ದೇ ಆಗಿವೆ. ದಂಡಕದ ಲಕ್ಷಣ, ಪ್ರಭೇದಗಳು ಸಂಸ್ಕೃತದಲ್ಲೇ ಇದ್ದರೂ, ಎಲ್ಲವೂ ಸಂಸ್ಕೃತದಲ್ಲಿ ಪ್ರಯೋಗ ಪಡೆದಂತಿಲ್ಲ. ಛಂದಶ್ಶಾಸ್ತ್ರಗಳಲ್ಲಿನ ಅಸಂಖ್ಯಾತ ದಂಡಕ ಪ್ರಭೇದಗಳಲ್ಲಿ ಕೆಲವು ರೂಪಗಳು ಮಾತ್ರವೇ ರೂಢಿಯಲ್ಲುಳಿದುವು. ಸಂಸ್ಕೃತದ 'ಶ್ಯಾಮಲಾ ದಂಡಕ'ದ ಮಾದರಿಯ ದಂಡಕಗಳೇ ಸ್ತೋತ್ರ ಸಾಹಿತ್ಯದಲ್ಲಿ ಕಂಡುಬರುತ್ತವಲ್ಲದೆ ಇತರ ಪ್ರಭೇದಗಳು ಪ್ರಸಿದ್ಧವಾಗಿಲ್ಲ. ತೆಲುಗಿನಲ್ಲಿ ದಂಡಕ ಇಂದಿಗೂ ವ್ಯಾಪಕವಾಗಿರುವ ಛಂದೋಬಂಧ. ಪ್ರಾಚೀನ ಕಾಲದಿಂದಲೂ ಇಲ್ಲಿ ದಂಡಕದ

ಪ್ರಯೋಗ ಮತ್ತು ಬೆಳವಣಿಗೆಯನ್ನು ಕಾಣಬಹುದಾಗಿದೆ. ಇಂದಿಗೂ ಆಂಧ್ರದ ಪಂಡಿತ ಕವಿಗಳು ರಚಿಸಿದ ದಂಡಕಗಳು ಅಲ್ಲಿನ ಸಾಮಾನ್ಯ ಜನರ ಜಿಹ್ವಾಗ್ರ ದಲ್ಲೂ ಜೀವಂತವಾಗಿವೆ. ಭಕ್ತಿರಸದ ಆವೇಶಪೂರ್ಣ ಅಭಿವ್ಯಕ್ತಿ, ದೈವಶಕ್ತಿಯ ಸುದೀರ್ಘ ಸ್ತುತಿ, ಪರಾಕು ಇವೇ ದಂಡಕಗಳು ಪ್ರಯೋಗವಾಗಿರುವ ಘಟ್ಟ ಗಳೆಂಬುದು ಗಮನಾರ್ಹ. ದಂಡಕದ ಓಟ ದೀರ್ಘ – ಸಂಯುಕ್ತಾಕ್ಷರ – ಪರುಷ ವರ್ಣಗಳ ಪ್ರವಾಹವಾಗಿದ್ದು ಸಾಹಿತ್ಯ ದೃಷ್ಟಿಯಿಂದ, ಗುಣವಾಚಕಗಳ ಮಾಲೆ ಯನ್ನು ಮಾತ್ರ ದಂಡಕದಲ್ಲಿ ನೋಡುತ್ತೇವೆ.

ಕನ್ನಡ ಸಾಹಿತ್ಯದಲ್ಲಿ ದಂಡಕದ ಪ್ರಯೋಗ ವಿರಳ. ಸೋಮರಾಜನ (ಸು. ೧೨೨೫) 'ಶೃಂಗಾರ ಸಾರ' ಅಥವಾ 'ಉದ್ಭಟ ಕಾವ್ಯ'ದಲ್ಲಿನ ದಂಡಕ, ಶ್ರೀಪಾದರಾಜರ (೧೪೫೧) 'ಶ್ರೀ ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕ' ಮತ್ತು ಷಡಕ್ಷರದೇವನ (೧೬೫೦) ಸ್ವತಂತ್ರ ಸ್ತೋತ್ರ ಕಾವ್ಯವಾದ 'ವೀರಭದ್ರ ದಂಡಕ' ಇವು ಹೊರತು ಬೇರೆಲ್ಲೂ ದಂಡಕ ಛಂದಸ್ಸಿನ ಪ್ರಮುಖ ಪ್ರಯೋಗಗಳು ನಮಗೆ ಕಂಡು ಬಂದಿಲ್ಲ. *

ದಂಡಕದ ಲಕ್ಷಣ

೨೭ ಅಥವಾ ಹೆಚ್ಚು ಅಕ್ಷರಗಳಿರುವ ಗುರ್ವಂತವಾದ ನಾಲ್ಕು ಪಾದಗಳು. ಪ್ರತಿ ಪಾದದ ಮೊದಲಿಗೆ ಎರಡು ನಗಣಗಳು (ಆರು ಲಘ್ವಕ್ಷರಗಳು)—ಇದು ದಂಡಕದ ಸಾಮಾನ್ಯ ಲಕ್ಷಣ. ಆರು ಲಘುಗಳ ಮುಂದೆ ಬರುವ ಅಕ್ಷರಗಣಗಳು ಮಗಣ (– – –) ನಗಣ (∪ ∪ ∪) ಗಳನ್ನುಳಿದು ಬೇರೆ ಯಾವ ಅಕ್ಷರಗಣ ವಾದರೂ ಆಗಿರಬಹುದು.

ಆದಿಯಲ್ಲಿನ ಆರು ಲಘುಗಳ ಮುಂದೆ ಸಾಮಾನ್ಯವಾಗಿ 'ರ'ಗಣ (– ∪ –) ಮತ್ತು 'ತ'ಗಣ (– – ∪) ಗಳೇ ನಿರಂತರವಾಗಿ ಬರುತ್ತವೆ. ಕೆಲವು ದಂಡಕ

---

* ೧೯೪೦ ರಲ್ಲಿ ಪ್ರಕಟವಾದ 'ಪಂಚಾಮೃತಂ' ಎಂಬ ಕೃತಿಯಲ್ಲಿ ಗ್ರಂಥಕರ್ತೃ ವಿದ್ವಾನ್ ಕೆ. ವಿ. ಕೃಷ್ಣಭಟ್ಟರು (ಕವಿ ಕಿಟ್ಟಣ್ಣಂ) "ಕಾಕದಂಡಕಂ" ಎಂಬ ದಂಡಕವನ್ನು ಬರೆದಿದ್ದಾರೆ. ಇದು ಹೀಗೆ ಪ್ರಾರಂಭವಾಗುತ್ತದೆ—

ಕಾಕಣ್ಣ ! ಏಕಿನಿತು ಬೇಸರಂ ನಿನಗಿಳಾತಳದಲ್ಲಿ ?

ಈ ರಚನೆ ಪಂಚಮಾತ್ರಾಗಣ ಘಟಿತವಾಗಿದೆ. ಅಕ್ಷರ ಗಣಾತ್ಮಕವಾಗಿ ಇಲ್ಲ. (ಸಂ.)

ಗಳಿಗೆ ಆದಿಯಲ್ಲಿನ ' ನ 'ಗಣದ್ವಯ ನಿಯಮವಿರುವುದಿಲ್ಲ. ' ತ 'ಗಣ ಅಥವಾ ' ರ 'ಗಣದಿಂದಲೇ ದಂಡಕ ಪ್ರಾರಂಭವಾಗಿ ಮುಂದುವರಿಯುತ್ತದೆ. ದಂಡಕದಲ್ಲಿ ಸಾಮಾನ್ಯವಾಗಿ ಬರುವ ' ಯ 'ಗಣ (ᑌ – –), ' ರ 'ಗಣ (– ᑌ –) ಮತ್ತು ' ತ 'ಗಣ (– – ᑌ) ಈ ಮೂರು ಗಣಗಳೂ ಪಂಚ ಮಾತ್ರಾ ಮೌಲ್ಯದ್ದಾಗಿರುವುದು ವಿಚಾರಣೀಯ. ಇದರಿಂದಾಗಿ ದಂಡಕಗಳಲ್ಲಿ ಉದ್ದಕ್ಕೂ ಪಂಚಮಾತ್ರಾ ಲಯವೇ ಇರುತ್ತದೆ. ಈ ಐದು ಮಾತ್ರೆಯ ಲಯವನ್ನು ಸಂಗೀತಶಾಸ್ತ್ರದಲ್ಲಿ ' ಝಂಪೆ ತಾಳ 'ವೆಂದು ಕರೆಯುವುದುಂಟು. ಆದ್ದರಿಂದ ದಂಡಕ ' ಸತಾಲ ' ವೃತ್ತ. ಯಗಣ, ರಗಣ ಮತ್ತು ತಗಣಗಳ ಮಾತ್ರಾಮೌಲ್ಯ ಐದಾದರೂ, ಐದು ಮಾತ್ರಾ ಮೌಲ್ಯದ ಬೇರೆ ವಿನ್ಯಾಸದ ಗಣಗಳು ಇಲ್ಲಿ ಬರಲಾಗದು. ಏಕೆಂದರೆ ಪ್ರತಿಯೊಂದು ಅಕ್ಷರಗಣವೂ ಮೂರು ಅಕ್ಷರಗಳಿಂದ ಮಾತ್ರ ಯೋಜಿತವಾಗಿರುತ್ತವೆ. ಇವನ್ನು ' ತ್ರಿಕ 'ಗಳೆಂದೂ ಕರೆಯುತ್ತಾರೆ. ಈ (ᑌ ᑌ ᑌ –), (ᑌ ᑌ ᑌ ᑌ ᑌ), (ᑌ – ᑌ ᑌ) (– ᑌ ᑌ ᑌ) ಮತ್ತು (ᑌ ᑌ – ᑌ) ವಿನ್ಯಾಸದ ಗಣಗಳು ಐದು ಮಾತ್ರೆಯವಾಗಿದ್ದರೂ, ಇವು ಮೂರಕ್ಕಿಂತ ಹೆಚ್ಚು ಅಕ್ಷರಗಳಿಂದ ಕೂಡಿರುವುದರಿಂದ ಅಕ್ಷರಗಣಗಳಲ್ಲಿ, ಮತ್ತು ಅಕ್ಷರಗಣಗಳಿಗೆ ಬದಲಾಗಿ ಇವು ಬರುವಂತಿಲ್ಲ.

ಇನ್ನು ಕೆಲವು ಮುಖ್ಯ ಛಂದಶ್ಶಾಸ್ತ್ರಜ್ಞರ ದಂಡಕ ಲಕ್ಷಣಗಳನ್ನು ವಿವೇಚಿಸಬಹುದು.

೧ ನಾಗವರ್ಮನ (೧೦ನೆಯ ಶ. ಮಾ.) ಛಂದೋಂಬುಧಿಯಲ್ಲಿ :

ವಚನ|| ರಗಳೆಯ ಲಕ್ಷಣಂ (ಲಕ್ಷ್ಯಂ) ಅಱುದಂಡಕಂಗಳಿಂದಕ್ಕುಂ :

ಅಮರ, ಗಣದ, ಮುಂದೆ ಬಂ,ದಗ್ನಿಗಳ್, ಚಂಡವೃ,ಷ್ಟಿ ಪ್ರಯಾ,ತಕ್ಕೆ
ಯೇ, ಬಿಪ್ಪ ; ದೆಂ,ಟಪ್ಪ ದ |
ತ್ತಮೆನಿ,ಸಿದೊಡೆ, ಯರ್ಣ ; ವೊಂ,ಬತ್ತರಿಂ, ದರ್ಣವಂ, ಪತ್ತಱಿಂ,
ದತ್ತಮಾ ವ್ಯಾಳ ; ಜೀ, ಮೂತ ಕಾ ||
ಗ್ರಮದೆ, ಬರಲ,ದೊಂದು ಲೀ,ಲಾಕರಂ (ಸುಂದರಂ, ಮುಂದೆರಳ್)
ಬಂದು ತಾಂ, ಸಂದಿರಲ್, ಪುಟ್ಟುಗುಂ |
ಕಮಲ, ವದನೆ, ಲೋಕಸಂ, ಸಿದ್ಧಮಾ, (ದಾಱಱಿಂ, ಮುಂತೆ
ನಾ,ನಾವಿಧಂ, ದಂಡಕಂ, ಪುಟ್ಟುಗುಂ) [1] *

---

೧ ಸಂ : ಕುಕ್ಕಿಲ ಕೃಷ್ಣಭಟ್ಟ, ಛಂದೋಂಬುಧಿ (ಪುಟ ೫೮)
ಇದರ ಸಾರಾಂಶವಿಷ್ಟು :

* ಲಕ್ಷ್ಯಪದ್ಯ ಮತ್ತು ಉದ್ಧೃತ ಪದ್ಯಭಾಗಗಳಲ್ಲಿ ಬಳಸಿರುವ ಅರ್ಧವಿರಾಮ ಚಿಹ್ನೆ ಗಣವಿಭಾಗವನ್ನು ಸೂಚಿಸುತ್ತದೆ.

ಇದರ ಸಾರಾಂಶವಿಷ್ಟು :

ಎರಡು 'ನ'ಗಣಗಳ (ಆರು ಲಘುಗಳ) ಮುಂದೆ ಏಳು 'ರ'ಗಣ (– ᑌ –) ಗಳು ಬಂದಲ್ಲಿ ಮೊದಲನೆಯ ಪ್ರಭೇದವಾದ 'ಚಂಡವೃಷ್ಟಿ ಪ್ರಯಾತ' ಎಂಬ ದಂಡಕವಾಗುವುದು. ನಗಣಗಳೆರಡರ ಮುಂದೆ ಏಳು 'ರ'ಗಣಗಳನಂತರ ಒಂದೊಂದು 'ರ'ಗಣ ಹೆಚ್ಚಿದಂತೆಲ್ಲಾ ಅರ್ಣ, ಅರ್ಣವ, ವ್ಯಾಳ, ಜೀಮೂತ ಮತ್ತು ಲೀಲಾಕರ ಎಂಬ ದಂಡಕಗಳಾಗುತ್ತವೆ. ಈ ಆರು ದಂಡಕಗಳಿಂದಲೇ ಮುಂದೆ ನಾನಾ ವಿಧವಾದ ದಂಡಕಗಳು ಹುಟ್ಟುತ್ತವೆ.

ಮೇಲಿನ ಲಕ್ಷ್ಯಪದ್ಯ 'ಚಂಡವೃಷ್ಟಿ ಪ್ರಯಾತ' ದಂಡಕದಲ್ಲಿದೆ. ಇದರಲ್ಲಿ ನಾಲ್ಕು ಪಾದಗಳು, ಪ್ರತಿ ಪಾದದಲ್ಲೂ ಎರಡು 'ನ'ಗಣ ಹಾಗೂ ಏಳು 'ರ'ಗಣಗಳು ಬಂದಿವೆ.

೨ ೧೧ – ೧೨ನೆಯ ಶತಮಾನದ ಜಯಕೀರ್ತಿ ಈ ಆರು ದಂಡಕ ಪ್ರಭೇದಗಳನ್ನೂ ಹೇಳಿ ಇನ್ನೂ ಕೆಲವು ಪ್ರಭೇದಗಳನ್ನೂ ತಿಳಿಸುತ್ತಾನೆ—

* ನಗಣ, ಯುಗಲ, ತೋऽಥ ರೈಃ, ಸಪ್ತಭಿ,ರ್ದಂಡಕ,ಶ್ಚಂಡ ವೃ,ಷ್ಟಿ
ಪ್ರಪಾ,ತಸ್ತ ಥೈ,ಕೋತ್ತರಂ |
ಪ್ರತಿ ಚ,ರಣ ವೃ,ದ್ಧಯೋऽ,ರ್ಣಾರ್ಣವ,ವ್ಯಾಲ ಜೀ,ಮೂತ ಲೀ,ಲಾ
ಕರೋ,ದ್ದಾಮ ಶಂ,ಖಾದಯಃ ||

ಪ್ರಚಿತ,ಇತಿ ನ,ಯುಗ್ಮ ತೋ, ಯೈ ಸ್ತಥಾ,ನ್ಯೈರಮಿ,ಶ್ರೀ ಕೃತೈ,
ಸ್ತತ್ ಪ್ರಮಾ,ಣೈರ್ಯ ದೋ,ತ್ಪದ್ಯತೇ |
ಶರ;ಗಿ,ರಿ; ಗತಿ, ಲೋಕ, ಲ,ಘ್ವಾದಿ ಕಾ,ಶ್ಚಂಡ ; ವಾ,ತಾ;ಬ್ಧ ;
ಸಿಂ,ಹಾ; ಹ್ವಯಾ,ಸ್ತೇ ; ನ್ವಿತಾಂ,ಶೋತ್ತರಾ ಃ ||

** ಚಂಡವೃ,ಷ್ಟ್ಯಾದಿಕಾ,ದೌ ಲಘೂ,ಕ್ತೌ ನಿಯಾ,ಮೋऽತ್ರ ಯೋ,
ವರ್ಜಯಿ,ತ್ವೇತಿ
ತಂ, ಪಂಡಿತೈಃ, ಶ್ರವ್ಯ ರೇ,ಫಾದಿಭಿ,ರ್ದಂಡಕಾಂ,ಶ್ಚೈಸ್ತಥಾ,
ಕೇವಲೈ,ರ್ಯೇಕೃತಾಃ |

ದಂಡಕಾ, ವೃತ್ತ ಶ,ಬ್ದಾಧಿಕಾ, ವೃತ್ತವೃ,ತ್ತೇಹಿ ಪಾ,ದೋಕ್ತ
ಲ,ಕ್ಷ್ಮೇತರಾ, ದಂಡಕಾ,

---

* — ಇದು ಚಂಡವೃಷ್ಟಿ ಪ್ರಯಾತ ದಂಡಕದಲ್ಲಿದೆ.

** ಈ ದಂಡಕ ಆದಿಯಲ್ಲಿ ಆರು ಲಘುವಿಲ್ಲದೆ ರಗಣಮಯವಾದ ದಂಡಕ (ಉತ್ಸವ)

ಯೇ ತು ತೇ, ಗದ್ಯ ಪೂ,ರ್ವಾಶ್ಚವಾ,ಲಾದಿ ಕಾ,ಸ್ತೇಽ ಥ ವಾ,ನೇಕ ಧಾ|

ಯಸ್ತಥೋಕ್ತ ಗಣಮಯೋ ಗುರೂತ್ತರಃ ಸ ಚೋತ್ಸವಾಭಿಧಾನ
ದಂಡಕೋ ಮಹಾರ್ಹದಾದಿ ದೇವತಾಸ್ತವೇ ಸ್ಮೃತಃ |

ಜಗಣೇ,ತರಾಬ್ಧಿ,ಮಾತ್ರಾ,ಗಣೋತ್ರ, ಭೃಶಮಯ,ಜಿಧಾಮ್ನಿ,
ಭವತಿ |

ಜಗಣೋ,ಥವಾನ್ಲ,ಗಣ ಏ,ಷ ನಿಧನೇ, ಗುರುಶ್ಚ,ತುಹಿ ಚಿ,ತ್ರ
ದಂಡ,ಕಃ [1] — ಜಯಕೀರ್ತಿಯ ಛಂದೋನುಶಾಸನ
(೬ – ೩೪)

ಜಯಕೀರ್ತಿ, ನಾಗವರ್ಮಪ್ರೋಕ್ತ ಚಂಡವೃಷ್ಟ್ಯಾದಿ ದಂಡಕಗಳಿಗೆ ಅದೇ ಲಕ್ಷಣಗಳನ್ನು ಹೇಳಿ, 'ಲೀಲಾಕರ' ದಂಡಕದನಂತರ ಉದ್ದಾಮ ಮುಂತಾದ ದಂಡಕಗಳನ್ನು ಹೇಳುತ್ತಾನೆ.

ಮೇಲಿನ ಲಕ್ಷಣ ಪದ್ಯಗಳ ಸಾರಾಂಶ ಹೀಗಿದೆ: (ಚಂಡವೃಷ್ಟ್ಯಾದಿ ಆರು ದಂಡಕಗಳನಂತರ) ನಗಣಗಳೆರಡರ ಮುಂದೆ ೧೩ 'ರ'ಗಣಗಳು ಬಂದರೆ 'ಉದ್ದಾಮ'ದಂಡಕ ; ೧೪ 'ರ'ಗಣಗಳು ಬಂದಲ್ಲಿ 'ಶಂಖ'ವೆಂಬ ದಂಡಕ ವಿಶೇಷ.

ಐದು ಲಘುಗಳ ಮುಂದೆ ಯಾವುದಾದರೊಂದು ಅಕ್ಷರಗಣ ಅನಿಯತ ಸಂಖ್ಯೆಯಲ್ಲಿ ಬಂದರೆ 'ಚಂಡ'ವೆಂಬ ದಂಡಕ. ಹೀಗೆ ಏಳು, ನಾಲ್ಕು ಮತ್ತು ಮೂರು ಲಘುಗಳ ಮುಂದೆ ಯಾವುದಾದರೊಂದು ಅಕ್ಷರಗಣ ನಿರಂತರವಾಗಿ ಬಂದರೆ, ಕ್ರಮವಾಗಿ ವಾತ, ಅಬ್ದ ಮತ್ತು ಸಿಂಹ ಎಂಬ ದಂಡಕಗಳಾಗುತ್ತವೆ.

ಆದಿಯ ಷಡ್ಲಘು ನಿಯಮವಿಲ್ಲದೆ ಆದ್ಯಂತವಾಗಿ ರಗಣಮಯವಾದ ದಂಡಕಗಳೂ ಪ್ರಸಿದ್ಧ. ಇವುಗಳನ್ನು ಮಾಲಾದಂಡಕ, ಗದ್ಯದಂಡಕವೆಂದು ಕರೆಯುತ್ತಾರೆ. ರಗಣಮಯವಾದ, ಗುರ್ವಂತವಾಗಿ ರಚಿಸಲ್ಪಟ್ಟ ದಂಡಕ— ಉತ್ಸವ ದಂಡಕವೆಂಬುದಾಗಿ ಮಹಾರ್ಹದಾದಿ ದೇವತಾಸ್ತುತಿಗಳಲ್ಲಿ ಪ್ರಶಸ್ತ. ಆದ್ಯಂತ ಚತುರ್ಮಾತ್ರಾಗಣ ಯೋಜನೆಯಿಂದಾದ ಗುರ್ವಂತ ಪಾದಗಳಿರುವ (ವಿಷಮ ಸ್ಥಾನ

---

೧ ಸಂ: ಕುಕ್ಕಿಲ ಕೃಷ್ಣಭಟ್ಟ, ಛಂದೋಂಬುಧಿ -(ಪುಟ ೬೦-೬೧)

ಗಳಲ್ಲಿ ಜಗಣ (ᑌ – ᑌ) ಅಥವಾ ಸರ್ವ ಲಘುಗಣ (ᑌ ᑌ ᑌ ᑌ) ಬರಬಹುದು) ದಂಡಕ ಚಿತ್ರದಂಡಕ. *

೩. ಇತರ ಕನ್ನಡ ಛಂದಶ್ಶಾಸ್ತ್ರಜ್ಞರ ದಂಡಕ ಲಕ್ಷಣಗಳು.

ಅ) ಕೇದಾರ ಭಟ್ಟನ ವೃತ್ತರತ್ನಾಕರವನ್ನು ಆಧರಿಸಿದ ಗುಣಚಂದ್ರನ (೧೬೫೦) ಛಂದಸ್ಸಾರದ ಚತುರ್ಥಾಧ್ಯಾಯದಲ್ಲಿ :

ವ|| ದಂಡಕ ಪ್ರಕರಣಂ ನಾಲ್ಕು ಪಾದ ಮವರೊಳೊಂದು ಪಾದಂ :

ನಯುಗ, ರ-ನಗ, ರೂಢಮ್ಞಂ, ಪಂಡಿತ, ಸ್ಪೀಡಿತಂ, ಚಂಡವೃಷ್ಟಿ
ಪ್ರಯಾ,ತಂ ವರಂ, ದಂಡಕಂ

* ಚರಣ, ಚರಣ, ರೇಫೆಯಿಂ, ವೃದ್ಧಿಯಂ, ಕೈಗೆಯಲ್, ಬರ್ಕುಮ,
ರ್ಣಾರ್ಣವಂ,
ವ್ಯಾಳಜೀ,ಮೂತ ಲೀ,ಲಾಕರೋ,ದ್ದಾಮ ಶಂ,ಖಾದಿಗಳ್,
ಪಂಡಿತ, ಪ್ರೌಢಿಯಿಂ, ದಿಂತು ತಾಂ, ನೀಡುಗುಂ |[1]

ನಾಗವರ್ಮನು ಹೇಳಿರುವ ಆರು ದಂಡಕಗಳೊಂದಿಗೆ ಜಯಕೀರ್ತಿ ಲಕ್ಷಣಿಸಿರುವ ಉದ್ದಾಮ ಮತ್ತು ಶಂಖ ದಂಡಕಗಳನ್ನೂ ಈತ ಪ್ರಸ್ತಾವಿಸಿದ್ದಾನೆ. ಅಲ್ಲದೆ

ನ ನ ಯ ಯ ಯ ಯ ಯ
ಪ್ರಚಿತ,ಕ ವೆಸ,ರಿನಿಂದಂ,ಡಕಂ ನ,ದ್ವಿಕಂ ಸಪ್ತ,ಯಂ ಸಾ,ರೆ ಯಕ್ಕುಂ,

ಯ ಯ
ಶುಭಾಢ್ಯಂ, ಸಮೀಢ್ಯಂ, |[2]

---

* ಜಗಣೇ | ತರಾಬ್ಧಿ | ಮಾತ್ರಾ | ಗಣೋತ್ರ | ಭೃಶಮಯ | ಜಿಥಾಮ್ನಿ |
ಭವತಿಜ|
ಗಣೋಥ | ವಾನ್ಲಗ | ಣ ಏಷ | ನಿಧನೇ | ಗುರುಶ್ಚ | ತುಹಿ ಚಿ | ತ್ರದಂಡ | ಗ
ಕಃ
ಇದು ಚಿತ್ರದಂಡಕದಲ್ಲೇ ಇದೆ— ಉದ್ದಕ್ಕೂ ಚತುರ್ಮಾತ್ರಾ ಗಣಗಳು, ಕೊನೆಯಲ್ಲೊಂದು ಗುರು.

* ಇದು ಶಂಖ ದಂಡಕ

೧ ಕನ್ನಡ ಛಂದಸ್ಸಂಪುಟ

೨ — ಅದೇ —

ಎರಡು ನಗಣಗಳ ಮುಂದೆ ಏಳು 'ಯ'ಗಣಗಳು ಬಂದರೆ ಅದು ಪ್ರಚಿತಕ ವೆಸರಿನ ದಂಡಕವಾಗುವುದು ಎಂದಿದ್ದಾನೆ (ಜಯಕೀರ್ತಿಯೂ ಇದನ್ನು ಲಕ್ಷಣಿಸಿದ್ದಾನೆ).

ಆ) ೧೮ಳಟರ ವೀರಭದ್ರನ ನಂದೀ ಛಂದೋರ್ಣವ, ಈಶ್ವರ ಕವಿಯ ಕವಿಜಿಹ್ವಾ ಬಂಧನದ ಪಡಿಯಚ್ಚು (ತೆಲುಗು ಛಂದಸ್ಸಿನ ಕೆಲವು ಭಾಗಗಳ ಹೊರತು)

ಈತ ದಂಡಕದ ಲಕ್ಷಣವನ್ನು ಸ್ವಲ್ಪದರಲ್ಲೇ ಹೇಳಿ ಮುಗಿಸಿದ್ದರೂ ಈ ಲಕ್ಷಣದಲ್ಲಿ 'ರ'ಗಣದ ಬದಲಿಗೆ 'ತ'ಗಣ ಪ್ರಯೋಗ ರೂಢಿಯಾದದ್ದನ್ನು ಗುರುತಿಸಬಹುದಾಗಿದೆ.

ಮೊದಲಾ ನಗಣಗಳೆರಡಿರೆ
ತದನಂತರ ತಗಣ ಸಪ್ತ ತಪ್ಪದಲಿದರೊಳ್
ಒದಗಿರೆ ದಂಡಕವೆನಿಪುದು
ಸುದತೀ ನೀ ಮುದದಿ ಕೇಳು ಸುಜನರಿಗೊಪ್ಪಂ [1]

ಕನ್ನಡದಲ್ಲಿ ದಂಡಕ ಪ್ರಯೋಗಗಳು ವಿರಳವಾದ್ದರಿಂದಲೇ ಈ ಛಂದಶ್ಶಾಸ್ತ್ರಜ್ಞರು ದಂಡಕವನ್ನು ವಿಶೇಷವಾಗಿ ಲಕ್ಷಣಿಸಿಲ್ಲ. ಸಂಪ್ರದಾಯದಂತೆ ಪೂರ್ವ ಛಂದಶ್ಶಾಸ್ತ್ರಜ್ಞರು ಹೇಳಿದ್ದನ್ನೇ ತಾವೂ ಹೇಳಿ ಸುಮ್ಮನಾಗಿದ್ದಾರೆ.

೪ ಅ) ತೆಲುಗಿನ ಪ್ರಮುಖ ಛಂದಶ್ಶಾಸ್ತ್ರಗಳಲ್ಲೊಂದಾದ ವೇಮುಲವಾಡ ಭೀಮಕವಿಕೃತ 'ಕವಿಜನಾಶ್ರಯಮು' ಎಂಬ ಗ್ರಂಥದಲ್ಲಿ ದಂಡಕಕ್ಕೆ ಈ ಲಕ್ಷಣವಿದೆ.

* "ಅಮರ,ಗ ನನ, ಹಂಬುಲಂ, ದಾದಿಗಾ,ನೊಂಡೆ ಕಾ,ದೇನಿ
ನಾ,ಟಿನ್ ದಕಾ,ರಂಬುಗಾ,ನೊಂಡೆ ಲೋ,ನನ್ ದಕಾ,ರಂಬು ಲಿ,ಮ್ಮೃ
ಗಕಾ,ರಾವ ಸಾ,ನಮ್ಮುಗಾ, ಜೆಪ್ಪಿನನ್, ದಂಡಕಂ,ಬಂಡ್ರು
ದೀ,ನಿನ್ ಗವೀಂ,ದ್ರುಲ್ ಜಗ,ದ್ಗೀತಕೀ,ರ್ತೀ ವಣಿ,ಗ್ವಂಶ
ಚೂ,ಡಾಮಣೀ,
ರೇಚನಾ, ನಿತ್ಯಧೀ,ಲೋ ಚನಾ, ತ್ಯಾಗ ವೈ,ರೋ ಚನಾ,
ಕಾವ್ಯ ಸಂ,ವೀಚನಾ |" [2]

---

೧ ಕನ್ನಡ ಛಂದಸ್ಸಂಪುಟ

* ಈ ದಂಡಕದಲ್ಲಿ ಆದಿಯ ಆರು ಲಘುಗಳ ನಂತರ ರಗಣಗಳೇ ನಿರಂತರವಾಗಿವೆ.

೨ ಉದ್ಧರಮಾಲಾ ವೃತ್ತಾಧಿಕಾರಮು. ಕವಿಜನಾಶ್ರಯಮು (ಪುಟ ೮೧)

ಆದಿಯಲ್ಲಿ ಎರಡು ನಗಣ, ಮುಂದೆ ತಗಣಗಳ ಮಾಲೆ ;

ಇದೊಂದು ಪದ್ಧತಿ. ತಗಣದಿಂದಲೇ ಆರಂಭಿಸಿ, ಮುಂದುವರಿಸಿ ಗುರ್ವಕ್ಷರ ದಿಂದ ಮುಗಿಸುವುದು ಮತ್ತೊಂದು ಪದ್ಧತಿ, ಎಂದು ಭೀಮಕವಿ ದಂಡಕವನ್ನು ಲಕ್ಷಣಿಸಿದ್ದಾನೆ.

ಆ) ತೆಲುಗಿನ ಮತ್ತೊಬ್ಬ ಛಂದಶ್ಶಾಸ್ತ್ರಜ್ಞನಾದ ಅಪ್ಪಕವಿ ತನ್ನ 'ಅಪ್ಪ ಕವೀಯಮು' ಎಂಬ ಗ್ರಂಥದಲ್ಲಿ :

"ಧೂರ್ತುಲ್ ನ,ಕಾರಂ ಬು,ಲುನ್ ರೆಂಟಿ,ಪೈ ಸಪ್ತ,ರೇ ಫಂ ಬು,ಲನ್
ಗೂರ್ಚಿ,ನನ್ ಜಂಡ,ವೃಷ್ಟ್ಯಾಖ್ಯ,ಮಯ್ಯೈನ್............"

ಎಂದು ನಾಗವರ್ಮಾದಿಗಳು ಹೇಳಿದ ಚಂಡವೃಷ್ಟ್ಯಾದಿ – ಶಂಖ ದಂಡಕ ಗಳನ್ನು ಹೇಳಿ ರೂಢಿಯಲ್ಲಿನ ದಂಡಕದ ಲಕ್ಷಣವನ್ನು ಹೇಳುತ್ತಾನೆ.

* ವಿದ್ವಾಂ ಸು,ಲೆಲ್ಲನ್ ಹ,ಕಾರಂ ಬೆ,ಕಾನೀ ನ,ಕಾರಂಬೆ,ಕಾನೀ
ಸ,ಕಾರಂಬೆ,ಕಾನೀ ವಿ,ಚೆಂಪನ್ದ,ಗುನ್ ಮುಂದು,ಗಾ ನಿಂದು,
ಗಾದೇನಿ, ಯಾದಿಂದ,ಕಾರಂಬು,ಗಲ್ಪಿಂಚಿ, ಯಾಮೀದ,ನೆಲ್ಲಂ ದ,
ಕಾರಂಬು,ಲೇ ಮೆಂಡು,ಗಾ ನಿಚ್ಚು,ಕುನ್ವಚ್ಚು, ನಂದಾಕ,ನಿರ್ಮಿಂಚಿ,
ಗುರ್ವಂತ,ಮುಂಜೇಸಿ,ನನ್ ದಂಡ,ಕಂಬಂಡ್ರು [1]

ಆದಿಯಲ್ಲಿ ತಗಣಾನಂತರ ನಿರಂತರವಾಗಿ 'ತ'ಗಣಮಾಲೆ. ಇದೇ ದಂಡಕದ ಪ್ರಸಿದ್ಧವಾದ ಲಕ್ಷಣ.

ದಂಡಕ ಮತ್ತು ಅದರ ಪ್ರಭೇದಗಳು

ದಂಡಕದಲ್ಲಿ ಪಾದವೊಂದಕ್ಕೆ ೨೬ ರಿಂದ ೯೯೯ರ ವರೆಗೆ ಅಕ್ಷರಗಳು ಬರಬಹುದು. "ಏವಮ್ ಏಕೋನ ಸಹಸ್ರಾಕ್ಷರ ವೃದ್ಧಿರ್ಭವತಿ ದಂಡಕಂವೃತ್ತಂ" [2] "ಅಲ್ಲದೆ ೨೬ ಕ್ಕಿಂತ ಹೆಚ್ಚು ಅಕ್ಷರಗಳಿರುವ ಮಾಲಾವೃತ್ತಗಳು ಮೊದಲಿಗಿರಲಿಲ್ಲ ವೆಂದೂ, ೨೬ ಕ್ಕಿಂತ ಹೆಚ್ಚಿನ ಅಕ್ಷರಗಳಿರುವ ವೃತ್ತಗಳೆಲ್ಲಾ ದಂಡಕಗಳೇ ಎಂದೂ

---

* ಈ ದಂಡಕದಲ್ಲಿ ಆದ್ಯಂತವಾಗಿ ತಗಣಗಳೇ ಬಂದಿವೆ.

೧ ಅಪ್ಪಕವೀಯಮು ಪುಟ ೨೬೦.

೨ ವೃತ್ತರತ್ನಾಕರ – ಪುಟ ೭೫.

ಭರತನು ಹೇಳುತ್ತಾನೆ".[1] "ವೃತ್ತರತ್ನಾಕರದ ವ್ಯಾಖ್ಯಾನದಲ್ಲಿ ಅದನ್ನೇ ದಂಡಕದ ಸಾಮಾನ್ಯ ಲಕ್ಷಣವಾಗಿ ಕೊಡಲಾಗಿದೆ

ಯತ್ಕಿಂಚದ್ದೃಶ್ಯತೇ ಛಂದಃ ಷಡ್ವಿಂಶಾದಧಿಕಾಕ್ಷರಂ
ಶೇಷಂ ಜಾತ್ಯಾಧಿಕಂ ಮುಕ್ತ್ವಾ ತತ್ಸರ್ವಂ ದಂಡಕಾನಿ ಹ|| "[2]

ಮೇಲೆ ಹೇಳಿದಂತೆ ದಂಡಕದ ಒಂದು ಪಾದ ೯೯೯ ಅಕ್ಷರಗಳಷ್ಟು ದೀರ್ಘವಾಗಿರಬಹುದು. ೯೯೯ ಅಕ್ಷರಗಳೆಂದರೆ; ೬ ಲಘುಗಳು ಮತ್ತು ೩೩೧ ಅಕ್ಷರ ಗಣಗಳು. ಇಷ್ಟು ಸಂಖ್ಯೆಯ ಗಣಗಳು ಒಂದೇ ಪಾದದಲ್ಲಿ ಬಂದಾಗ ಪಾದನಿಯಮದ ಔಚಿತ್ಯವೇ ಕಂಡುಬರುವುದಿಲ್ಲ. ಇದರಿಂದಲೇ ದಂಡಕಕ್ಕೆ ಇಂತಿಷ್ಟೇ ಪಾದ, ಗಣ ಇರಬೇಕೆಂಬ ನಿಯಮ ಹೋಗಿ ಸಾಮಾನ್ಯ ದೀರ್ಘವೃತ್ತದಂತಿದ್ದ ದಂಡಕ, ಮಾಲಾ ರೂಪಕ್ಕೆ ತಿರುಗಿತು. ೧೨ನೆಯ ಶತಮಾನದ ಹೇಮಚಂದ್ರನ (ಛಂದೋನುಶಾಸನ ಕಾರ) ಕಾಲಕ್ಕೆ ದಂಡಕಕ್ಕೆ ಒಂದು ಸಿದ್ಧಲಕ್ಷಣ ಬಂದು, ಪಾದ ಗಣಸಂಖ್ಯಾ ನಿಯಮ ತಪ್ಪಿಹೋಯಿತೆಂದೆನಿಸುತ್ತದೆ.

ಜಯಕೀರ್ತಿ, ಪಾದಾರಂಭಕ್ಕೆ ಷಡ್ಲಘು ನಿಯಮವಿಲ್ಲದೆ, ರ-ಯ-ತ-ಸ-ಜ-ಭ ಯಾವುದೇ ಒಂದು ಅಕ್ಷರಗಣ ನಿರಂತರವಾಗಿದ್ದರೂ ದಂಡಕವಾಗುವುದು ಎಂದಿದ್ದಾನೆ. ಹೇಮಚಂದ್ರ 'ಪ್ರಚಿತ' ದಂಡಕಕ್ಕೆ ಬರಬೇಕಾದ್ದು 'ಯ' ಗಣ ಒಂದೇ ಅಲ್ಲ, ಇತರ ಗಣ ಯಾವುದಾದರೂ ಬರಬಹುದೆಂಬ ಲಕ್ಷಣಕೊಡುತ್ತಾನೆ. "ಪಿಂಗಳನು ಏಳಕ್ಕಿಂತ ಹೆಚ್ಚಿನ ರಗಣಗಳಿರುವ ದಂಡಕಗಳನ್ನು 'ಪ್ರಚಿತ' ವೆಂಬ ಒಂದೇ ಸಂಜ್ಞೆಯಿಂದ ಕರೆದಿದ್ದಾನೆ. ಒಂದೊಂದೇ ರಗಣ ವೃದ್ಧಿಯಾದಂತೆಲ್ಲಾ ಅರ್ಣ, ಅರ್ಣವ, ವ್ಯಾಲ, ಇತ್ಯಾದಿ ಪ್ರತ್ಯೇಕ ಹೆಸರುಗಳನ್ನು ಅನಂತರದ ಛಂದಶ್ಶಾಸ್ತ್ರಕಾರರು ಕೊಟ್ಟದ್ದು.

"ಯತ್ರ ರೇಫಃ ಸ್ವಯಂ ಸ್ವೇಚ್ಛಯಾ ಗುಂಫಿತಃ ಸಃ
ಸ್ಮೃತೋ ದಂಡಕೋ ಮತ್ತ ಮಾತಂಗ ಲೀಲಾಕರಃ

---

೧ 'ದಂಡಕಂ ನಾಮವಿಜ್ಞೇಯಂ ಷಡ್ವಿಂಶಾದಧಿಕಾಕ್ಷರಂ
ವೃತ್ತಂ ಮಾಲಾಧಿಕಂ ತಸ್ಮಾನ್ನೋಕ್ತಂ ಚಾದೌ ಗುಹಾದಿನ (ನಾಟ್ಯಶಾಸ್ತ್ರ)'
ಛಂದೋಂಬುಧಿ ಪೀಠಿಕೆ XXXiv

೨ ಛಂದೋಂಬುಧಿ – ಪೀಠಿಕೆ.

ಏಕೋನ ಸಹಸ್ರಾಕ್ಷರಂ ಯತ್ರ ಪಾದೋ
ಭವೇತ್ ಯಥೇಷ್ಟ ಕಲ್ಪಿತಾಭಿಧಾನ ದಂಡಕಾ ಭವಂತಿ "[1]
(ಘನಶ್ಯಾಮದಾಸಕೃತ ಸಂಗೀತ ಸಾರ ಸಂಗ್ರಹ)

ಎಲ್ಲಿ ಸ್ವೇಚ್ಛೆಯಾಗಿ 'ರ'ಗಣಗಳು ಆದ್ಯಂತವಾಗಿ ಗುಂಫಿತಾವಾಗುವುದೊ ಅದೇ ದಂಡಕ. ಒಂದು ಪಾದದಲ್ಲಿ ೯೯೯ ಅಕ್ಷರಗಳ ವರೆಗೂ ಬರಬಹುದು. ಅಂದರೆ ಒಂದು ಪಾದಕ್ಕೆ ೭ ರಿಂದ ೩೩೩ ರಗಣಗಳ ವರೆಗೆ ಇಷ್ಟಬಂದಷ್ಟು ಗಣಗಳನ್ನಿಟ್ಟು ರಚಿಸಿ ಇಷ್ಟಬಂದ ಹೆಸರುಗಳನ್ನು ಕೊಟ್ಟಿದೆ. ಪ್ರತಿಯೊಬ್ಬ ಛಂದಶ್ಶಾಸ್ತ್ರಕಾರ ನಿಂದಲೂ ಹೀಗೆ ಪ್ರಭೇದಗಳು ಬೆಳೆಯುತ್ತಾ ಹೋದವು. ಚಂಡವೃಷ್ಟ್ಯಾದಿ ದಂಡಕಗಳೇ ಅಲ್ಲದೆ,

ಆರಾಮ, ಸಂಗ್ರಾಮ, ಸುರಾಮ, ವೈಕುಂಠ, ಸಾರ,
ಕಾಸಾರ, ವಿಸಾರ, ಸಂಹಾರ, ನೀಹಾರ, ಮಂದಾರ,
ಆಪಾರ, ಸತ್ಕಾರ, ಸಂಸ್ಕಾರ, ಮಾಕಂದ, ಗೋವಿಂದ,
ಸಾನಂದ, ಸಂದೋಹ, ಆನಂದ.[2]*.

ಈ ದಂಡಕಗಳು ಎರಡು ನಗಣದ ಮುಂದೆ ೧೫ ರಗಣಗಳನಂತರ ಆಗುವ ಒಂದೊಂದು ರಗಣವೃದ್ಧಿಗೂ ಕ್ರಮವಾಗಿ ಬಂದ ಹೆಸರುಗಳು.

ದಂಡಕದಲ್ಲಿ ಮೊದಲಿಗೆ, ರಗಣಯೋಜನೆ ಮಾತ್ರ ರೂಢಿಯಲ್ಲಿದ್ದು ಆನಂತರ ಅಷ್ಟೇ ಮಾತ್ರಾಮೌಲ್ಯದ 'ಯ'ಗಣ, 'ತ'ಗಣಗಳನ್ನೂ ಬಳಸಲು ಮೊದ ಲಾಯಿತು. ಆದಿಯ ಲಘುನಿಯಮವೂ ಕೈಬಿಟ್ಟುಹೋಗಿ, ದಂಡಕವೆಂಬುದು ತಗಣ ಅಥವಾ ರಗಣಗಳ ಮಾಲೆಯಾಯಿತು. ಚಂಡವೃಷ್ಟ್ಯಾದಿ ದಂಡಕಗಳು ಛಂದೋಗ್ರಂಥಗಳಲ್ಲಿ ಲಕ್ಷ್ಯ ಪದ್ಯಗಳ ರೂಪದಲ್ಲಿ ಮಾತ್ರವಿದ್ದು, ಪ್ರಯೋಗಗಳಲ್ಲಿ ಅಷ್ಟಾಗಿ ಕಾಣಸಿಗವು. ದಂಡಕ ಪ್ರಭೇದಗಳು, ಅವುಗಳ ಲಕ್ಷಣ ಈ ವಿವರಗಳನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ. ದಂಡಕಗಳ ರೂಪ, ಬೆಳವಣಿಗೆಯನ್ನರಿಯುವ ದೃಷ್ಟಿ ಯಿಂದ ಇದರ ಪರಿಶೀಲನೆ ವಿಹಿತ.

---

೧ ಛಂದೋಂಬುಧಿ ಪುಟ ೧೫೪

೨ ವೃತ್ತರತ್ನಾಕರದ ವ್ಯಾಖ್ಯಾನದಲ್ಲಿ ತರ್ಕವಾಚಸ್ಪತಿಯ (ನಿಘಂಟುಕಾರ) ವಾಕ್ಯೋದ್ಧರಣ.

* ಈ ಅಂಶವನ್ನು ನನಗೆ ತಿಳಿಸಿಕೊಟ್ಟ ವಿದ್ವಾನ್ ಎನ್. ರಂಗನಾಥಶರ್ಮ ಅವರಿಗೆ ಋಣಿಯಾಗಿದ್ದೇನೆ.

ದಂಡಕ ಸಾಹಿತ್ಯ

ಸಂಸ್ಕೃತದಲ್ಲಿ

ಸಂಸ್ಕೃತ ಸ್ತೋತ್ರ ಸಾಹಿತ್ಯದಲ್ಲಿ ದಂಡಕ ಛಂದೋಬಂಧ, ಮಿಕ್ಕ ವೃತ್ತಗಳು, ಶ್ಲೋಕಗಳು ಪ್ರಯೋಗವಾದಷ್ಟು ಸಂಖ್ಯೆಯಲ್ಲಿ ಆಗಿಲ್ಲ. ಶ್ಯಾಮಲಾದಂಡಕದಲ್ಲಿ ಆದಿಯಲ್ಲಿ ಎರಡು ನಗಣ, ಅಲ್ಲಿಂದಾಚೆಗೆ ರಗಣಗಳೇ ನಿರಂತರವಾಗಿ ಬಂದಿವೆ. ಎಲ್ಲೋ ವಿಶೇಷವಾಗಿ ನಿಯತಗಣಗಳಿರುವ ದಂಡಕಗಳು ಪ್ರಯೋಗವಾಗಿವೆ. ಇಂಥದ್ದೊಂದು ದಂಡಕ ಮಾಲತೀಮಾಧವ ಕಾವ್ಯದ್ದು.

ಪ್ರಚಲಿ,ತಕರಿ, ಕೃತ್ತಿಪರ್ಯಂತ ಚಂ,ಚನ್ನಖಾ,ಘಾತ
ಭಿನ್ನೇಂದು ನಿಸ್ಯಂದ ಮಾನಾಮೃತಶ್ಚ್ಯೋತ ಜೀವತ್ಕಪಾಲಾವಲೀ,
ಮುಕ್ತ ಚಂಡಾಟ್ಟ ಹಾಸತ್ರ ಸದ್ಘೂರಿತ,ಪ್ರವೃತ್ತ,ಸ್ತುತಿ........[1]
(ಇದು ಪದ್ಮಕವೆಂಬ ದಂಡಕವೆನ್ನಲಾಗಿದೆ.)

ಇಂಥ ಕೆಲವನ್ನು ಬಿಟ್ಟರೆ ಸಂಸ್ಕೃತದಲ್ಲಿ ಉಳಿದವೆಲ್ಲಾ ಅತಿ ದೀರ್ಘವಾದ ಮಾಲಾದಂಡಕಗಳು. ಇಪ್ಪತ್ತನೆಯ ಶತಮಾನದ ಮಧ್ಯಭಾಗದ ವರೆಗೆ ಅನೇಕ ಭಕ್ತಿಪರ ದಂಡಕಗಳನ್ನು ಪಂಡಿತರು ರಚಿಸಿದ್ದಾರೆ. ಮಾದರಿಗಾಗಿ ಒಂದನ್ನು ನೋಡಬಹುದು. ಇದನ್ನು ರಚಿಸಿದವರು ಕೀ. ಶೇ. ಆಲೂರು ವಿಶ್ವೇಶ್ವರ ಶಾಸ್ತ್ರಿಗಳು (ದೊಡ್ಡಜಾಲ). ಸುಮಾರು ೧೯೪೫ – ೫೦ರ ಅವಧಿಯಲ್ಲಿ ಈ ದಂಡಕದ ರಚನೆ ಯಾಯಿತೆಂದು ತಿಳಿದುಬಂದಿದೆ. [2]

‘ ಶ್ರೀರಾಮ ದಂಡಕ ’

ಶ್ರೀಮನ್‌ಮ,ಹಾ ಚಂಡ,ಧಾಮಾನ್ವ,ಯಾಂಭೋಧಿ,ಸೋಮ ಪ್ರ,ಶಸ್ತಾ,ಮ,ರ ಸ್ತೋಮ, ಸಂಕೀರ್ತಿ,ತಾನಂತ,ನಾಮ ತ್ರಿ,ಲೋಕಾಭಿ,ರಾಮ ಕ್ಷ್ಮಾಭೃಲ್ಲ,ಲಾಮ

---

೧ ಚಾಮುಂಡಾ ತಾಂಡವ ವರ್ಣನ – ಛಂದಸ್ಸಾರ (ಪುಟ – ೭೮)

೨ ಕಂಠಸ್ಥವಾದ ಈ ದಂಡಕವನ್ನೂ ಇದರ ರಚನಾ ಕಾಲವನ್ನೂ ತಿಳಿಸಿಕೊಟ್ಟ ಈ ದಂಡಕ ರಚಕರ ಮೊಮ್ಮಗ ಶ್ರೀ ಜೆ.ಆರ್. ಸೀತಾರಾಮ ಶಾಸ್ತ್ರಿಗಳಿಗೆ ಲೇಖಕನು ಕೃತಜ್ಞ.

ಪ್ರ,ಮತ್ತಾರಿ, ಸಂಹಾರ, ಕಾಮಾದಿ,ಷಡ್ವರ್ಗ,ದೂರೀ ಕೃ,ತಾಘ ಪ್ರ,ಚಾರಾಮ, ರಾರಾತಿ, ಗರ್ವಾಂಧ,ಕಾರಾರ್ಕ, ಭೂರಿಪ್ರ,ತಾಪಾವ,ತಾರಾ ನ,ಮದ್ವಕ್ತ್ರ, ಸಂದೋಹ, ಮಂದಾರ, ಕಾರುಣ್ಯ,ಪೂರ ಸ್ಫು,ರತ್ಕೀರ್ತಿ,ವಿಸ್ತಾರ, ಪಾಥೋಧಿ, ಗಂಭೀರ, ಹೇ ಪಾಂಡು,ರೀಭೂತ, ದಿಙ್ಮಂಡ, ಲೋದ್ದಂಡ, ದೋರ್ದಂಡ, ವಿಶ್ವೇಶ, ಹೃತ್ಪಂಡ,ರೀಕಾಧಿ,ವೇಶ ಶ್ರಿ,ಲೋಕೇಶ, ರಕ್ಷೋಗ,ಣಕ್ಷೋಭ,ಕೃತ್ ಪೀನ,ವಕ್ಷ ಪ್ರಫುಲ್ಲಾಂಬು, ಜಾತಾಕ್ಷ, ಕೋದಂಡ,ದೀಕ್ಷಾ ಗುರೋ ರಾಮ,ಚಂದ್ರಪ್ರ,ಭೋ ಪಾಹಿ,ಮಾಂ ಪಾಹಿ,

ಇದಲ್ಲದೆ, 'ಭವಾನೀ ದಂಡಕ'ವೊಂದನ್ನೂ ಈ ಕವಿ ರಚಿಸಿದ್ದಾನೆ.

ತೆಲುಗಿನಲ್ಲಿ

ತೆಲುಗು ಸಾಹಿತ್ಯದಲ್ಲಿ ದಂಡಕಗಳ ಭೋರ್ಗರೆವ ಪ್ರವಾಹಗಳೇ ಇವೆ. ಸಾಮಾನ್ಯವಾಗಿ ಎಲ್ಲಾ ಹಿಂದೂ ಸಂಪ್ರದಾಯದ ದೇವತೆಗಳಿಗೂ ಇಲ್ಲಿ ದಂಡಕಗಳುಂಟು. 'ನೂಕಾಲಮ್ಮ'ನಂಥ ಗ್ರಾಮದೇವತೆಯೂ ಇದಕ್ಕೆ ಹೊರತಲ್ಲ. ಕೊನೆಗೆ ತೆಲುಗಿನ ಪೌರಾಣಿಕ ನಾಟಕ - ಚಲನಚಿತ್ರ, ಸಾಹಿತ್ಯದಲ್ಲೂ ಇದು ವ್ಯಾಪಿಸಿರುವುದನ್ನು ಗಮನಿಸಿದರೆ ಇದರ ವಿಪುಲತೆಯ ಅರಿವಾಗದಿರದು. ಮಾದರಿಗಾಗಿ ತೆಲುಗಿನ ಪ್ರಮುಖ ಕಾವ್ಯಗಳಲ್ಲಿ ಪ್ರಯೋಗವಾದ ಎರಡು ದಂಡಕಗಳನ್ನು ಇಲ್ಲಿ ಕೊಟ್ಟಿದೆ.

೧ ಈಶ್ವರ ದಂಡಕಮು

ಈ ದಂಡಕ 'ಶ್ರೀಮದಾಂಧ್ರ ಭಾರತದ' ಕಿರಾತಾರ್ಜುನೀಯ ಪ್ರಸಂಗದಲ್ಲಿದೆ.

> ಶ್ರೀಕಂಠ, ಲೋಕೇಶ, ಲೋಕೋದ್ಭ,ವಸ್ಥಾನ, ಸಂಹಾರ,ಕಾರೀ
> ಮು,ರಾರೀ ಪ್ರಿ,ಯಾ ಚಂದ್ರ,ಧಾರೀ ಮ,ಹೇಂದ್ರಾದಿ,ಬೃಂದಾರ,
> ಕಾನಂದ,
> ಸಂದೋಹ, ಸಂಧಾಯ, ಪುಣ್ಯಸ್ವ,ರೂಪಾ ವಿ,ರೂಪಾ ಕ್ಷ,
> ದಕ್ಷಾಧ್ವ,ರ ಧ್ವಂಸ,ಕಾ ದೇವ, ನೀದೈನ, ತತ್ತ್ವಂಬು, ಭಾವಿಂಚಿ,
> ಬುದ್ಧಿಂಬ್ರ,ಧಾನಂಬು ಗರ್ಮಂಗು, ವಿಜ್ಞಾನ,ಮಧ್ಯಾತ್ಮ,ಯೋಗಂಬು,
> ಸರ್ವಕ್ರಿ,ಯಾಕಾರ,ಣಂಬಂದು,.... ....
> ....

ತ್ರೈಲೋಕ್ಯ,ನಾಥಾ ; ಮ,ಹಾದೇವ, ದೇವಾ ನ,ಮಸ್ತೇ ನ,ಮಸ್ತೇ ನ,ಮಃ

೨ ಅಕ್ರೂರ ದಂಡಕಮು

ಈ ದಂಡಕ ಪೋತನಾಮಾತ್ಯ ಕೃತ 'ಶ್ರೀಮದಾಂಧ್ರ ಮಹಾಭಾಗವತ'ದ ದಶಮಸ್ಕಂದದ ಪೂರ್ವಭಾಗದಲ್ಲಿ ರಚಿತವಾಗಿದೆ.

ಶ್ರೀಮಾನಿನೀ ಚಿತ್ತ,ಚೋರಾ ಶು,ಭಾಕಾರ,ವೀರಾ ಜ,ಗದ್ಧೇತು,
ಹೇತುಪ್ರ,ಕಾರಾ ಸ,ಮಸ್ತಂಬು,ನಸ್ತಂಗ,ತಂಬೈ ಮಹಾಲ್ಲೋಲ,
ಕಲ್ಲೋಲ, ಮಾಲಾಕು,ಲಾಭೀಲ, ಪಾದೋ ನಿ,ಧಿಂ ಗೂಲ,ಗಾ
ಬಾಲ,ಕೇಳೀ ಗ,ತಿಂದೇಲಿ, ನಾರಾಯ,ಣಾಖ್ಯಂಬ,ಟುಖ್ಯಾತಿ,
ಸಂಧಿಲ್ಲ, ನೀನಾಭಿ,ಕಂ ಜಂಬು,ಲೋ ಲೋಕ, ಪುಂಜಂಬು, ಲೋ
ಬನ್ನು, ವಿನ್ನಾಯಿ, ಯ್ಯೆ ಮನ್ನ,ಯೀ ಬೊಮ್ಮ,ಯುತ್ಪನ್ನ,
ಡಯ್ಯೆಂಗ,ದಾ ಪಾವ,ಕಾಕಾರ, ವಾತಾವ,ನೀ ವಾರ್ಯ. . . .
. . . .
. . . ನನ್ನು ಮಾಯಾವಿ,ಪನ್ನಂ ವಿ,ಷಣ್ಣುನ್,ಬ್ರ,ಸನ್ನುಂಡ,ವೈ
ಖಿನ್ನ,ತಂ ಬಾಪಿ, ಮನ್ನಿಂಪ,ವೇ ಪನ್ನ,ಗಾಧೀಶ,ತಲ್ಪಾ ಕೃ,ಪಾ ಕಲ್ಪ,
ವಂದಾರು, ಕಲ್ಪಾ ನ,ಮಸ್ತೇ ನ,ಮಸ್ತೇ ನ,ಮಃ [1]

ಹೀಗೆ, ವಿಘ್ನೇಶ್ವರದಂಡಕಮು, ಸರಸ್ವತೀದಂಡಕಮು, ಆಂಜನೇಯ ದಂಡಕಮು, ಭಾಸ್ಕರದಂಡಕಮು, ವಿಷ್ಣುದಂಡಕಮು, ಹನೂಮದ್ದಂಡಕಮು, (ಇಡೀ ರಾಮಾಯಣದ ಕಥೆ ಸಂಗೃಹೀತವಾದ) ಶ್ರೀರಾಮ ದಂಡಕಮು, ಕಾಶೀ ದಂಡಕಮು, ಶ್ರೀ ಅಮ್ಮವಾರಿದಂಡಕಮು, ನೂಕಾಲಮ್ಮ ದಂಡಕಮು, ಲಘುಶಕ್ತಿ ದಂಡಕಮು, ತಲ್ಪುಲಮ್ಮ ದಂಡಕಮು, ಭಗವದ್ದಂಡಕಮು, ಮಹಾಶಕ್ತಿ ದಂಡ ಕಮು ಮತ್ತು ಶ್ರೀಕೃಷ್ಣದಂಡಕಮು ಇನ್ನೂ ಮೊದಲಾದ ದಂಡಕಗಳು ತೆಲುಗು ಭಕ್ತಿಸಾಹಿತ್ಯದಲ್ಲಿ ಹೇರಳವಾಗಿವೆ. ತೆಲುಗಿನಲ್ಲಿ ರೂಢಿಯಲ್ಲಿರುವುದು ಆದ್ಯಂತವಾಗಿ ತಗಣಗಳು ಬರುವ ದಂಡಕಮಾತ್ರ. ಮೇಲೆ ಉದಾಹರಿಸಿದ ಎರಡು ದಂಡಕಗಳು ಮತ್ತು ಹೆಸರಿಸಿದ ೧೫ ದಂಡಕಗಳೂ ಸಹ ಇದೇ ರೀತಿಯವು.

ಈ ದಂಡಕಗಳಲ್ಲಿ ತೆಲುಗಿನ ವಿಶಿಷ್ಟವಾದ ವಡಿ, ಪ್ರಾಸ, ಅನುಪ್ರಾಸಾದಿಗಳಿಂದ ರೂಪಿತವಾದ ಸಿದ್ಧಶೈಲಿಯನ್ನು ಕಾಣಬಹುದಾಗಿದೆ.

---

೧ ದಂಡಕ ರತ್ನಮುಲು.

ಕನ್ನಡದಲ್ಲಿ

ಕನ್ನಡದಲ್ಲಿ ದಂಡಕ ಮೊದಲಿಗೆ ಕಾಣಿಸಿಕೊಳ್ಳುವುದು; ಸೋಮರಾಜನ ಉದ್ಭಟ ಕಾವ್ಯದಲ್ಲಿ. ಈ ದಂಡಕವೂ ಸಾಮಾನ್ಯ ದಂಡಕಗಳಂತೆ ಭಕ್ತಿಸ್ತುತಿಯೇ. ಕನ್ನಡ ಕಾವ್ಯದಲ್ಲಿ ಪ್ರಯೋಗವಾಗಿದೆ ಎಂಬ ಅಂಶವನ್ನು ಬಿಟ್ಟರೆ ಇದು ಸಂಪೂರ್ಣವಾಗಿ ಸಂಸ್ಕೃತ ದಂಡಕವೇ. ಇದರ ರಚನೆ – ಬಂಧ ಇವೂ ಸಹ ಸಿದ್ಧಶೈಲಿಯದು. ತಗಣದಿಂದಲೇ ಮೊದಲಾಗಿ ಮುಂದುವರಿದು ತಗಣದಿಂದಲೇ ಮುಗಿಯುತ್ತದೆ.

ರಾರಾಜಿ,ತಾಷ್ಟಾಂಗ, ಯೋಗಪ್ರ,ತಿಷ್ಠಾಪ,ನಾಚಾರ್ಯ,
ಯೋಗೀಂದ್ರ,ಹೃದ್ಧಾಮ, ನಿಸ್ಸೀಮ, ನಿಷ್ಕಾಮ, ನಿಶ್ಚಿಂತ,
ನಿರ್ಭ್ರಾಂತ, ನಿಸ್ಸಂಗ, ನಿರ್ಲಿಂಗ, ನಿರ್ಲೇಪ, ನಿಷ್ಪಾಪ,
ನಿಷ್ಪುಣ್ಯ, ನಿರ್ಗಣ್ಯ, ನಿರ್ಮಾಯ, ನಿಷ್ಕಾಯ, ನಿರ್ಮೋಹ,
ನಿರ್ಗೇಹ, ನಿರ್ವಾದ, ನಿರ್ಭೇದ, ನಿಷ್ಕಾಲ, ...
. . . .
. . . . . ನಿರ್ಲಕ್ಷ್ಯ, ನಿರ್ದಕ್ಷ, ಪಂಪಾವಿರೂಪಾಕ್ಷ[1]

ಇಲ್ಲಿ ಆದಿಯ ನಗಣಗಳಿಲ್ಲ. ತಗಣಮಯವಾದ ಇದು ಕಾಮಬಾಣ ಎಂಬ ದಂಡಕವಾಗುತ್ತದೆ.[2]

ಎರಡನೆಯದಾಗಿ ಶ್ರೀಪಾದರಾಜರ 'ಶ್ರೀ ಲಕ್ಷ್ಮಿನೃಸಿಂಹ ಪ್ರಾದುರ್ಭಾವ' ದಂಡಕ. ಇದು ಭಾಗವತದ ಏಳನೆಯ ಸ್ಕಂದ ಎಂಟನೇ ಅಧ್ಯಾಯದ ಕನ್ನಡ ಅನುವಾದ. ಈ ದಂಡಕದ ಒಂದು ವಿಶೇಷ, ಇದು (ಕೆಲವು ಸಂಸ್ಕೃತ ಶಬ್ದಗಳಿದ್ದರೂ) ಕನ್ನಡ ದಂಡಕವಾಗಿರುವುದು. ಧಾಟಿ, ಬಂಧ ಸಂಸ್ಕೃತದ್ದೇ,

---

೧ ಉದ್ಭಟಕಾವ್ಯ ೪ – ೧೦ ವಚನ

೨ ಈ ದಂಡಕವನ್ನು ಕುರಿತು ಶ್ರೀ ಚನ್ನಪ್ಪ ಎರೆಸೀಮೆ ಅವರು (ಕ. ಸಾ. ಪ. ಪ. ಜೂನ್ ೧೯೭೬) ಈ ದಂಡಕದ ಮೊದಲಿಗೆ ದಂಡಕದಾದಿಯಲ್ಲಿ ಸಾಮಾನ್ಯವಾಗಿ ಬರಬೇಕಾದ ಎರಡು ನಗಣಗಳು ಬಂದಿಲ್ಲದಿರುವುದರಿಂದ ಇದು ದಂಡಕ ಹೌದೇ ? ಎಂದು ಅನುಮಾನಿಸಿದ್ದಾರೆ. ಆದಿಯ ನಗಣದ್ವಯವಿಲ್ಲದೆ ಆದ್ಯಂತವಾಗಿ ತಗಣ ಯೋಜನೆಯಿರುವ ದಂಡಕ 'ಕಾಮಬಾಣ' ಎಂದು ಹೇಮಚಂದ್ರನ ದಂಡಕ ಪ್ರಭೇದಗಳಲ್ಲಿದೆ. ಆದ್ದರಿಂದ ಈ ಸಂದೇಹ ಅನಗತ್ಯ.

“ ಶ್ರೀರಮಾ,ಮಾನಿನೀ, ಮಾನಸೇಂ,ದೀವರೋ,ತ್ಫುಲ್ಲ ಸಂ,ಫುಲ್ಲ
ಚಂ,ದ್ರಾ ಚಿದಾ,ನಂದ ಸಾಂ,ದ್ರಾಸದಾ,ಸನ್ನುತೇಂದ್ರಾ ನಮೋ,
ಪೇಂದ್ರ
ನಿ,ಸ್ತಂದ್ರ ನೀ,ಕೇಳು ಆ,ರೀತಿ ಪ್ರ,ಹ್ಲಾದನಲ್, ಸಜ್ಜನಾ,ಹ್ಲಾದನಲ್,
ದೈತ್ಯ ಸ,ತ್ಪುತ್ರ ರಾ,ವೇಳೆ ಶ್ರೀ, ಕಾಂತನ, ಜ್ಞಾನ ಭ,ಕ್ತಿ ಕ್ರಿಯಾ,
ಗಾದೆಗಳ್, ಬೋಧೆಗಳ್, ಕೇಳಿ ತಾ,ವೆಲ್ಲರಾ,ಮಾರ್ಗದ,ಲ್ಲೀ ಸುನಿ-,
ರ್ದಿಷ್ಟ ಸ,ನ್ಮಾರ್ಗದ,ಲ್ಲೀ ಪರಾ,ಭೂತ ಷ,ಡ್ವರ್ಗದ,ಲ್ಲೀ ಮನಸ್ಸಿತ್ತು
ಧ,ರ್ಮಾರ್ಥ ಕಾ,ಮ
ಸ್ಪೃಹ,ಗ್ರಂಥಗಳ್, ಸಿದ್ಧ, ಸಂ,ಸಾರ ಸಂ,ಬಂಧಗಳ್,
ಹತ್ತುವೂ,ದಾಗದೇ, * ದಾನವಾ,ಚಾರ್ಯ ರಾ,ಶ್ಚರ್ಯದಿಂ,ದಾಗ
ತಾ,ವೇ **ಸುನೀ,ತಿಂದ** * ಲಾ, ಯಾಸುರೀ ವಿದ್ಯೆಗಳ್, ಗದ್ಯಗಳ್,
ಪದ್ಯಗಳ್, **ಸಾರ ಪೇ,ಳ್ತಿದ್ದರಾ,** * ಪಾಠಗಳ್ ಒಪ್ಪದೇ, ತಪ್ಪದೇ,
ನಿಂತುಮಾ,ರಾಟಗಳ್, ಮಾಡುತಾ, ವಿಷ್ಣು ಭ,ಕ್ತಿಕ್ರಿಯಾ,
ಪಾಠಗಳ್, ಪಾಡುತಾ, ಎಲ್ಲರೊಂ,ದಾಗೆ ತಾ,ವ್ನೋಡಿ ಅಂ,ಜ್ಯಾಡಿ ”[1]
ಇ, ನ್ನೇನು ಈ . . . .

ಕೊನೆಯದಾಗಿ ಷಡಕ್ಷರದೇವನ ವೀರಭದ್ರ ದಂಡಕ

“ ಜಯ ಜ,ಯ ಜಗ,ದಾಧಾರ, ವಿಸ್ಫಾರ, ವಿಸ್ತಾರ, ರೋಷೋ
ನ್ಮಿ,ಷದ್ಭರ್ಗ,
ನಿರ್ಗಚ್ಛ,ದೋರು ಜ್ವ,ಲ ಜ್ವಾಲ, ಫಾಲಾನ,ಲಾಕ್ಷ ಸ್ಫುರದ್ವಿಸ್ಫು,
ಲಿಂಗ
ಸ್ಫು, ಟೋ ದ್ಭೂತ, ಜಾತಾದಿ, ರೌದ್ರಾಕೃ,ತೇ ಸ್ಫೀತ, ಭೋಗೀಶ್ವ,ತೇ
ಬಾಲ, ಚಂದ್ರಪ್ರ,ಭಾಭೀಲ, ದಂಷ್ಟ್ರದ್ವ,ಯೋದ್ಯೋತಿ, ತೋದ್ಯತ್ಕ,-
ಪೋಲ ಸ್ಫು,ರದ್ಭೂಕು,ಟಿಭ್ರಾಜಿ, ನೇತ್ರತ್ರ,ಯಾಂಚದ್ಯು, ತೇ
ಕ್ಷ್ಮಾರ್ಧ,

---

* ಈ ಭಾಗಗಳನ್ನು ಗಮನಿಸಿದಲ್ಲಿ ಪದಗಳನ್ನೆಳೆದು ತಂದು ರಗಣಕ್ಕೆ ಭರ್ತಿಮಾಡಿದಂತೆ ಅನ್ನಿಸುತ್ತದೆ. ಕನ್ನಡದ ಜಾಯಮಾನಕ್ಕೆ ದಂಡಕ ಒಗ್ಗುವುದಿಲ್ಲ ಎಂಬುದನ್ನು ಗಮನಿಸಬಹುದು.

೧ ಕರ್ನಾಟಕ ಹರಿದಾಸ ಸಾಹಿತ್ಯ.

ತೇಜಃ ಪ,ತೇ ಸೂತ್ನ, ರತ್ನಸ್ಫು,ರತ್ಸೋಮ, ಭೀಮಾಹಿ,ಪಗ್ರೈವ,
ಸುಗ್ರೀವ,
ಹೃದ್ಯನ್ಮ,ಣಿಪ್ರೋದ್ಯು,ತಿ ಪ್ರೋಲ್ಲ,ಸನ್ಮೌಳಿ ಸಂಬದ್ಧ, ಸುಸ್ನಿಗ್ಧ,
ಪೀಯೂಷ, ...
. . . . . ಚಿತ್ಸ್ವಾಮಿ,ತಾರ್ಥಪ್ರ,ದಾಸ್ಮದ್ವಿ, ಭೋ ಭಾನು,
ಮನ್ನಾಥ, ಭೂಯೋ ನ,ಮಸ್ತೇ ನ,ಮಸ್ತೇ ನ,ಮೋಸ್ತು [1]

ಕೃಷ್ಣಾವಧೂತರ ರಾಘವೇಂದ್ರತಂತ್ರದಲ್ಲಿನ 'ಅಶ್ವಧಾಟಿ' ಕಾಮಬಾಣ ದಂಡಕದ ಮಾರ್ಪಾಟಾದ ರೂಪ. ಅದರ ಒಂದು ಪಾದ ಹೀಗಿದೆ.

ತ ತ ತ ತ ತ ತ
ಚಂಡೀಶ, ಕಾಂಡೇಶ, ಪಾಖಂಡ, ವಾಕ್ಕಾಂಡ, ತಾಮಿಶ್ರ, ಮಾರ್ತಾಂಡ,
ತ ಗ
ಪಾಷಂಡ ಭೋ |

ತ ತ ತ ತ ತ ಗ
ಶ್ರೀ ರಾಘ,ವೇಂದ್ರಾರ್ಯ, ಶ್ರೀ ರಾಘವೇಂದ್ರಾರ್ಯ, ಪಾಹಿಪ್ರ, ಭೋ
(ಪಲ್ಲವಿ) [2]

ಸ್ವಲ್ಪಮಟ್ಟಿಗೆ ದಂಡಕವನ್ನು ಹೋಲುವ ಇಂಥದ್ದೇ ವೃತ್ತ ಚುರಮುರಿ ಶೇಷಗಿರಿ ರಾಯರ ಶಾಕುಂತಲದಲ್ಲಿದೆ.

ಸೈಲ್ಬಿಟ್ಟ,ರಲ್ ರಶ್ಮಿ,ಗಳ್ ಕರ್ಣ,ಗಳ್ ನಿಚ್ಚ,ಳಂಗೈದು, ಪುಚ್ಛಂ
ನಿ,ಗುರ್ಚುತ್ತೆ, ಮೇಣ್ |
ಜೋಲ್ದಿದ್ದ, ಗೋಣ್ಣಾದ,ಲಂ ಗಾಳಿ,ಗೇಳುತ್ತೆ, ಬೀಳ್ದಂತಿ,ರಲ್
ಮಾರು, ಪೇರ್ಜಾಪಿ,ನಂ ||
ಕಾಲ್ಬಿಟ್ಟ, ಹೆಗ್ಗುರಂ,ಗಳ್ ಬೀಸ,ಲಾ ಪೆಟ್ಟ,ನಿಂದೇಳ್ವ,ಧೂಳ್
ತಮ್ಮ,ನಂ ಮುಟ್ಟ,ದಂ |
ತೋಲ್ಬಿದ್ದಿ,ರಲ್ ಸಾಗ,ರಂ ತಾಳ್ವ,ವೇನೀರ್ಷ, ಸಾರಂಗ,ದೋಳೀ
ತು,ರಂಗಂಗ,ಳು ||

---

೧ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. (ಜೂನ್ ೧೯೭೬) 'ಷಡಕ್ಷರದೇವನ ಸ್ತೋತ್ರ ಸಾಹಿತ್ಯ'

೨ ಸಂಸ್ಕೃತ ಛಂದಸ್ಸಿಗಿತ್ತ ಕನ್ನಡದ ಕಾಣಿಕೆ—ಸಂಶೋಧನ ಪಂಚದಶಿ.

ಚುರಮುರಿಯವರೇ ಇದನ್ನು 'ಅಶ್ವಧಾಟಿ' ಎಂದಿದ್ದಾರೆ.[1]

ಇಲ್ಲಿ ಪ್ರತಿ ಪಾದದಲ್ಲಿ ೭ ತಗಣ + ೧ ಗುರು. ಮೂರನೆಯ ಪಾದದ ಎರಡನೆಯ ಗಣ ಮಾತ್ರ ರಗಣವಾಗಿದೆ.

ಕಾಮಬಾಣದ ಇನ್ನೊಂದು ರೀತಿಯ ದಂಡಕ (ಗಣಧಾ) ಕನ್ನಡದ ಲಲಿತ ರಗಳೆಯ ರೀತಿಯಿದೆ. ರೂಪಗೋಸ್ವಾಮಿರಚಿತ 'ಗಣಧಾ' ಯುಗ್ಮ :

"ಭಕ್ತೋಗ್ರ, ಸೇನಾರ್ಪಿ,ತ ಸ್ಮಿತ, ಸಪ್ತಾಂಗ
ಮಾಂರಕ್ಷ, ಕುಬ್ಜಾಂಗ, ರಾಗೇಣ, ಲಿಪ್ತಾಂಗ"[2]

ಇಲ್ಲಿ ಪಾದಕ್ಕೆ ೪ ತಗಣ ಮತ್ತು ಅಂತ್ಯಪ್ರಾಸ ಬಂದಿದೆ.

ಜಯಕೀರ್ತಿ ಲಕ್ಷಣಿಸಿರುವ ವಿಶೇಷ ದಂಡಕಗಳನ್ನು ಮಧ್ವಾಚಾರ್ಯರು ಪ್ರಯೋಗಿಸಿದ್ದಾರೆ.

ಅತಿಮತ ತ,ಮೋಗಿರಿ, ಸಮಿತಿ,ವಿಭೇದ,ನ ಪಿತಾ,ಮಹ ಭೂ,ತಿದ ಗು,ಣನಿಲ,ಯ |
* { ಶುಭತಮ ಕ,ಥಾಶಯ, ಪರಮ, ಸದೋದಿ,ತ ಜಗ,ದೇಕ ಕಾ,ರಣ ರಾ,ಮ ರಮಾ,ರಮಣ |
ವಿಧಿಭವ ಮು,ಖಸುರ, ಸತತ,ಸುವಂದಿ,ತ ರಮಾ,ಮನೋವ,ಲ್ಲಭ ಭ,ವ ಮಮ,ಶರಣಂ

ಈ ಸ್ತೋತ್ರದಲ್ಲಿ ಒಟ್ಟು ೨೫ ಚಂಡ, ೨ ಅಬ್ದ, ೪ ಸಿಂಹದಂಡಕ ಪಾದಗಳಿವೆ.[3]

ರಗಳೆ — ದಂಡಕ

ನಾಗವರ್ಮ ಸಂಸ್ಕೃತದ ಮಾಲಾವೃತ್ತವನ್ನು ಹೇಳುವ ತೃತೀಯಾಧಿಕಾರದಲ್ಲಿ ಕನ್ನಡದ ರಗಳೆಯ ಲಕ್ಷಣವನ್ನು ಹೇಳಿ, ಮುಂದೆ "ರಗಳೆಯ ಲಕ್ಷಣಂ ಅಱುದಂಡಕಂ

೧, ೨.. ಸಂಸ್ಕೃತ ಛಂದಸ್ಸಿಗಿತ್ತ ಕಾಣಿಕೆ—ಸಂಶೋಧನ ಪಂಚದಶಿ.

* ಇದು ಚಂಡ ಭೇದ— ಒಟ್ಟು ೨೯ ಅಕ್ಷರಗಳು (೫ ಲಘು + ೮ ತ್ರಿಕಗಳು).

೩ ಭೀಮರಾವ್ ಚಿಟಗುಪ್ಪಿ : 'ಸಂಸ್ಕೃತ ಛಂದಸ್ಸಿಗಿತ್ತ ಕನ್ನಡದ ಕಾಣಿಕೆ'

ಗಳಿಂದಕ್ಕುಂ" ಎಂದಿದ್ದಾನೆ. ಇದರಿಂದ ದಂಡಕ – ರಗಳೆ ಎರಡೂ ಒಂದೇ ಎಂಬ ಅರ್ಥ ಹೊರಡಬಹುದು. ರಗಳೆಯ ಪ್ರಾಚೀನ ಪ್ರಯೋಗಗಳು ಎನ್ನಬಹುದಾದ ಪಂಪ - ರನ್ನಾದಿಗಳು ರಚಿಸಿರುವ ರಗಳೆಗಳೆಲ್ಲವೂ ಮಾತ್ರಾಗಣಬದ್ಧವಾಗಿವೆ. ಅಕ್ಷರಗಣದ 'ತ್ರಿಕ' ನಿಯಮ ಅಲ್ಲಿ ಕಂಡುಬರುವುದಿಲ್ಲ. ರಗಳೆಯನ್ನು ಹೋಲುವ ಪ್ರಾಕೃತದ 'ಕಡವಕ', 'ಪಜ್ಝಟಿಕೆ' ಗಳು ಅಕ್ಷರಗಣ ನಿಯಮವನ್ನು ಸ್ವಲ್ಪ ಮಟ್ಟಿಗೆ ಉಳಿಸಿಕೊಂಡಿದ್ದು, ಅದರ ಪ್ರಭಾವದಿಂದ ಬೆಳೆದ ರಗಳೆ (ಅಂಶಗಣ ಬದ್ಧವಾದ ಮೂಲ ಷಟ್ಪದಿ ಮಾತ್ರಾಗಣಕ್ಕೆ ತಿರುಗಿದಂತೆ) ಮಾತ್ರಾಗಣ ಬಂಧವಾಗಿ ಬದಲಾಗಿರಬಹುದು.

"'ರಘಟ' ಎಂದರೆ ರಗಣಗಳ ಘಟ (ಸಮೂಹ), ಮೊದಲಿಗೆ ರಗಳೆಯಲ್ಲಿ ಬರುತ್ತಿದ್ದುದು ನಿರಂತರ ರಗಣಗಳು. ಅಂದರೆ ದಂಡಕ ಮತ್ತು ರಗಳೆ ಆದಿಯಲ್ಲಿ ಏಕರೂಪತೆಯನ್ನು ಹೊಂದಿದ್ದುವು. 'ಗಣನಿಯಮ ವಿಪರ್ಯಾಸ' ವೆಂದರೆ ಈ ರಗಣನಿಯಮಕ್ಕೆ ವಿಪರ್ಯಾಸವಾಗಿ ಅರ್ಥಾತ್ ರಗಣ ಅಥವಾ ಐದುಮಾತ್ರೆಯ ಗಣಗಳು ಬರುವುದೇ ರಗಳೆಯ ಲಕ್ಷಣ. ಸಂಸ್ಕೃತದಲ್ಲಿ ಅಷ್ಟಿಷ್ಟು ವ್ಯತ್ಯಾಸವಿದ್ದ ದಂಡಕವೇ ಮೊದಲಿಗೆ 'ರಘಟಾಬಂಧ'ವೆಂದೂ 'ಪದ್ಧತಿ' ಯೆಂದೂ ಕರೆಯಲ್ಪಡುತ್ತಿತ್ತು. ದಂಡಕದ ೭ ರಗಣದ ಬದಲು ಪಾದದಲ್ಲಿ ಏಳು ಪಂಚಮಾತ್ರಾಗಣಗಳು ಬಂದು ಲಲಿತ ವೃತ್ತಗಳೆಂದು ಕರೆಯಲ್ಪಟ್ಟವು" ಎಂದು ಕುಕ್ಕಿಲಕೃಷ್ಣಭಟ್ಟರು ಅಭಿಪ್ರಾಯಪಡುತ್ತಾರೆ.[1]

ಈ ಅಭಿಪ್ರಾಯದ ಮಥಿತಾರ್ಥ; ದಂಡಕದಿಂದಲೇ ರಘಟಾಬಂಧ ಹುಟ್ಟಿತು. 'ರಘಟ' ಸಂಸ್ಕೃತವಾದ್ದರಿಂದ ರಗಳೆಯ ಮೂಲ ಸಂಸ್ಕೃತ ಎಂದಾಗುತ್ತದೆ.

ಸಂಸ್ಕೃತದಲ್ಲಿ ರಘಟಾಬಂಧ ಅಷ್ಟಾಗಿ ಕಂಡುಬರುವುದಿಲ್ಲವಾದ್ದರಿಂದ ರಗಳೆ ಕನ್ನಡದ್ದು ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ರಗಳೆ - ದಂಡಕ ಇವೆರಡೂ ಲಕ್ಷಣ ವಿಚಾರದಲ್ಲಿ ಪರಸ್ಪರ ಸಂಬಂಧಿಯೇ ಎಂಬ ಸಂದೇಹ ಹುಟ್ಟುವುದು ನಾಗವರ್ಮನ ದಂಡಕ ಲಕ್ಷಣ ಪದ್ಯದಿಂದ ಮಾತ್ರ.* ಆದ್ದರಿಂದ ರಗಳೆಯ ಮೂಲ ನಿರ್ಣಯವಾಗುವ ವರೆಗೆ ಇವೆರಡನ್ನೂ ಬೇರೆಯಾಗಿಯೇ ವಿವೇಚಿಸುವುದು ವಿಹಿತವೆನಿಸುತ್ತದೆ.

---

೧ ಛಂದೋಂಬುಧಿ — ಪೀಠಿಕೆ.

* ಪ್ರತಿ ಛಂದೋಬಂಧಕ್ಕೂ ಲಕ್ಷಣವನ್ನು ಅದೇ ಛಂದಸ್ಸಿನಲ್ಲಿ ಹೇಳುವ ನಾಗವರ್ಮ ರಗಳೆಯ ಲಕ್ಷಣವನ್ನು ಮಾತ್ರ ಕಂದಪದ್ಯದಲ್ಲಿ ಹೇಳಿಬಿಟ್ಟಿರುವುದು ಮತ್ತೂ ತೊಡಕಾಗಿದೆ.

ಪ್ರಾಕೃತದ ಕಡವಕ, ಪಜ್ಝುಟಿಕೆಗಳಿಗೆ ಪಾದನಿಯಮವಿದೆ, ರಗಳೆಗಳಿಗಿಲ್ಲ. ರಗಳೆಯ ಗಂಭೀರಗಮನಕ್ಕೂ ದಂಡಕದ ನಾಗಾಲೋಟಕ್ಕೂ ವ್ಯತ್ಯಾಸವಿದೆ. ರಗಳೆಯಲ್ಲಿ ವಿವಿಧ ಲಯದ ವೈವಿಧ್ಯವಿದ್ದರೆ ದಂಡಕದ ಲಯ ಉದ್ದಕ್ಕೂ ಝುಂಪೆ ತಾಳವೇ. ರಗಳೆಗೆ ಮಧ್ಯೆ ಮಧ್ಯೆ ನಿಲುಗಡೆ, ವಿರಾಮ ಉಂಟು. ದಂಡಕ, ಆದಿಯ 'ತಗಣ' ಗಿರಿಯಿಂದ ಧುಮ್ಮಿಕ್ಕಿತೆಂದರೆ ಅಂತ್ಯದ ಗುರ್ವಕ್ಷರದ ಭೂಸ್ಪರ್ಶವಾಗುವ ವರೆಗೆ ಅಖಂಡ.

ದಂಡಕ – ರಗಳೆ ಎರಡೂ ವರ್ಣನಾಪ್ರಧಾನವಾದ ಛಂದೋಬಂಧಗಳು. ಹಳೆಯ ರಗಳೆಗಳು ಪ್ರಕೃತಿವರ್ಣನೆ, ನಗರವರ್ಣನೆ, ಕಥಾಪ್ರಸಂಗಗಳಿಗೆ ಮೀಸಲಾದರೆ ದಂಡಕಗಳು ದೈವಸ್ತುತಿಗೇ ಮುಡುಪು.

ಪ್ರಸ್ತುತ, ರಗಳೆ - ದಂಡಕ ಸಂಬಂಧ ಚರ್ಚೆಯಲ್ಲಿ, ದಂಡಕ ಒಂದು ಪಂಚಮಾತ್ರಾಗಣವೃತ್ತವೆಂಬ ಭ್ರಾಂತಿಯಿಂದ ಸರಳರಗಳೆಯನ್ನು ದಂಡಕವೆಂದು ಭ್ರಮಿಸಿ ಬಂದ ಒಂದು ಪ್ರತಿಕ್ರಿಯೆಯನ್ನು ನೋಡಬಹುದು—

> "ರಗಳೆಯಿಂದ ಸರಳರಗಳೆಯನ್ನು ರೂಪಿಸಿಕೊಂಡ ಖ್ಯಾತಿ ನವೋದಯ ಕವಿಗಳಿಗೆ ಸಲ್ಲಬೇಕು. ಆದರೆ ಎಸ್. ಅನಂತನಾರಾಯಣ ಅವರು ಸು. ೧೮೦೦ರಲ್ಲಿದ್ದ ಯಾದವ ಕವಿಯ 'ಕಲಾವತೀ ಪರಿಣಯ' ದಿಂದ ಕೆಲವು ಸಾಲುಗಳನ್ನು ಉದ್ಧರಿಸಿ ಅವು ವಾಸ್ತವವಾಗಿ ಸರಳರಗಳೆಯೇ ಆಗಿವೆ ಎಂದೂ ಆ ಕವಿಯಲ್ಲಿ ಆಕಸ್ಮಿಕವಾಗಿ ಹೀಗೆ ಸರಳರಗಳೆ ಕಾಣಿಸಿಕೊಂಡಿತೇ ಹೊರತು ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಂಡದ್ದಲ್ಲವೆಂದೂ ವಾದಿಸಿದ್ದಾರೆ.
>
> 'ಕಲಾವತೀ ಪರಿಣಯದಿಂದ' ಸುದೀರ್ಘಭಾಗಗಳನ್ನು ಉದ್ಧರಿಸಿ ಆ ಕೃತಿಯು ದಂಡಕದಲ್ಲಿ ರಚಿತವಾಗಿದೆಯೆಂದು ಬೆಳ್ಳಾವೆ ವೆಂಕಟನಾರಣಪ್ಪನವರು ತಮ್ಮ ಲೇಖನವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ (ನಿರ್ದಿಷ್ಟ ಸಂಖ್ಯೆಯ ಗಣಗಳ ದೊಡ್ಡ ಸರಪಳಿಯೇ ದಂಡಕ. ಅದು ಪದ್ಯದ ಲಯವಿರುವ ಗದ್ಯವೆಂದೇ ಹೇಳಿಬಿಡಬಹುದು). ಅಲ್ಲಿ ಉದ್ಧೃತವಾಗಿರುವ ಕೃತಿಭಾಗಗಳನ್ನು ಪರಿಶೀಲಿಸಿದರೆ ಮೇಲ್ನೋಟಕ್ಕೇ ಗೊತ್ತಾಗುತ್ತದೆ, ಅದು ಐದುಮಾತ್ರೆಯ ಗಣಗಳು ಏಕಪ್ರಕಾರವಾಗಿ ಕಂಡುಬರುವ ದಂಡಕ ಎಂಬುದು. ಯಾದವ ಕವಿ ರಗಳೆಯನ್ನೂ ಬರೆದಿಲ್ಲ, ಸರಳರಗಳೆಯನ್ನೂ ಬರೆದಿಲ್ಲ. ದಂಡಕವನ್ನು ಐದುಮಾತ್ರೆಯ ನಾಲ್ಕು ನಾಲ್ಕು ಗಣಗಳಾಗಿ ಜೋಡಿಸಿ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯ ಮೂರನೆ ಸಂಪುಟದಲ್ಲಿ ಅಚ್ಚುಮಾಡಿಸಿದ್ದೂ

ಕೃತಿಯು ರಗಳೆಯ ರೂಪವಾಗಿದೆ ಎಂದು ಹೇಳಿದ್ದೂ ಮೇಲಿನ ತಪ್ಪು ಕಲ್ಪನೆಗೆ ಕಾರಣವಾಯಿತು ".[1]

ಈ ಅಭಿಪ್ರಾಯದ ವಿವೇಚನೆ ಮಾಡುವ ಮುನ್ನ ಕಲಾವತೀಪರಿಣಯದ ಒಂದೆರಡು ಸಾಲುಗಳನ್ನು ನೋಡೋಣ.

– – ᴗᴗ ᴗᴗᴗ ᴗᴗᴗᴗᴗ ᴗ ᴗᴗᴗ
|ಇತ್ತಾ ಧ|ನಂಜಯನು| ವಿಜಯವ|ರ್ಜುನ ಕೆಣಕಿ|

ᴗ ᴗᴗ ᴗᴗᴗᴗ – ᴗ ᴗᴗᴗ – ᴗ ᴗ – ᴗ
|ಮುನಿದು ಕದ|ನವ ಮಾಡಿ| ಧುರದಿ ಮೂರ್ಛಿತನಾಗೆ|

ᴗᴗᴗᴗᴗ ᴗᴗᴗ ᴗᴗ – ᴗ ᴗᴗ ᴗᴗᴗ —
ನೃಪನವನ| ಪಿಡಿಯಲನು| ವಾಗುತಿರು| ವನಿತರೊಳ್| [2] *

ಇದು ಐದು ಮಾತ್ರೆಗಳಿಂದಾದ ಛಂದೋಬಂಧವೆಂದು ಮೇಲ್ನೋಟಕ್ಕೇ ತಿಳಿಯುತ್ತದೆ, ಸರಿ. ಆದರೆ ಇದು ದಂಡಕವಲ್ಲ. ಪಾದನಿಯಮವಿಲ್ಲವೆಂಬುದರ ಹೊರತು ದಂಡಕದ ಯಾವ ಲಕ್ಷಣವೂ ಇದಕ್ಕಿಲ್ಲ. ಇಲ್ಲಿನ ಗಣಗಳು [(ᴗᴗᴗ–) (–ᴗᴗᴗ) (ᴗᴗ–ᴗ) (ᴗ–ᴗᴗ) (ᴗᴗᴗᴗᴗ)] ಸ್ಪಷ್ಟವಾಗಿ ಪಂಚಮಾತ್ರಾ ಗಣದ ವಿವಿಧ ವಿನ್ಯಾಸಗಳಾಗಿವೆಯೇ ಪರಂತು, ದಂಡಕದಲ್ಲಿ ಬರಲೇಬೇಕಾದ ಮೂರಕ್ಷರದ (ತ್ರಿಕ) ಅಕ್ಷರಗಣಗಳಲ್ಲ. ನಿಸ್ಸಂದೇಹವಾಗಿ ಮೇಲಿನ ಪದ್ಯಭಾಗ ಸರಳರಗಳೆಯ ರೂಪದಲ್ಲಿದೆ. ಅಂದಲ್ಲಿ ೨೦ನೆಯ ಶತಮಾನಕ್ಕೆ ಹಿಂದೆಯೇ ಯಾದವ ಕವಿ ಸರಳರಗಳೆಯನ್ನು ಪ್ರಯೋಗಿಸಿದ್ದಂತೂ ಸಾಕ್ಷೀಭೂತಸತ್ಯ. ಅಂದಮಾತ್ರಕ್ಕೆ ಸರಳರಗಳೆಯನ್ನು ರೂಪಿಸಿಕೊಂಡ ನವೋದಯ ಕವಿಗಳ ಖ್ಯಾತಿಗೆ ಭಂಗವೇನೂ

---

೧ ಎಂ. ಚಿದಾನಂದಮೂರ್ತಿ " ರಗಳೆ–ಸರಳರಗಳೆ ಮತ್ತು ಮಹಾಛಂದಸ್ಸು "— ಸಹ್ಯಾದ್ರಿ— ಪುಟ ೫೬೭.

೨ ಕಲಾವತೀ ಪರಿಣಯ (ಪುಟ ೧೫೨)
ಕೃಪೆ : ಶ್ರೀ ಆರ್. ಎಸ್. ರಾಮರಾವ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

* 'ಕಲಾವತೀ ಪರಿಣಯ' ಕೃತಿಯನ್ನು ಒದಗಿಸಿಕೊಟ್ಟು ಪ್ರೋತ್ಸಾಹಿಸಿದ ಶ್ರೀ ಆರ್. ಎಸ್. ರಾಮರಾವ್ (ಕನ್ನಡ ಸಾಹಿತ್ಯ ಪರಿಷತ್ತು) ಅವರಿಗೆ ನಾನು ಋಣಿ.

ಬರುವುದಿಲ್ಲ. ಆದ್ದರಿಂದ ಎಸ್. ಅನಂತನಾರಾಯಣ ಅವರ 'ವಾದ' ಸಮಂಜಸವಾಗಿದೆ. ಅಲ್ಲದೆ ಬೆಳ್ಳಾವೆ ವೆಂಕಟನಾರಣಪ್ಪನವರು "ಗ್ರಂಥದ (ಕಲಾವತೀ ಪರಿಣಯದ) ಅನೇಕ ಭಾಗಗಳು ಈಗಲೂ ತಾಳಕ್ಕೆ ಹೊಂದುವಂತೆ ಕಾಣುವುದು. ಆಲೋಚನೆಮಾಡಿದಲ್ಲಿ ಕವಿತೆಯ ಧಾಟಿಯು ದಂಡಕವಾಗಿರಬಹುದೆಂದು ಹೊಳೆಯುವುದು"[1] ಎಂದಿದ್ದಾರೆಯೇ ಹೊರತು, ಈ ಕೃತಿ ದಂಡಕದಲ್ಲೇ ರಚಿತವಾಗಿದೆ ಎಂದು ಅವರು ಸ್ಪಷ್ಟಪಡಿಸಿಲ್ಲ. ಇದನ್ನು ಸಮರ್ಥವಾಗಿ ಪರಿಭಾವಿಸಿ, ಈ ಕೃತಿಯ ಭಾಗಗಳು ಸರಳರಗಳೆಯನ್ನು ಹೋಲುವುದನ್ನು ಗಮನಿಸಿಯೇ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯ ಮೂರನೆ ಸಂಪುಟದಲ್ಲಿ ಇವನ್ನು ರಗಳೆಯರೂಪದಲ್ಲಿ ಕೊಟ್ಟಿದ್ದಾರೆ.

ದಂಡಕವನ್ನು ಸ್ತೋತ್ರ ಸಾಹಿತ್ಯದಲ್ಲಿ ಮಾತ್ರ ಕಾಣಬಹುದು ಎಂಬುದನ್ನು ನೋಡಿದ್ದೇವೆ. ಇದೊಂದು ಬಗೆಯ ಚಮತ್ಕಾರ ಪದ್ಯರಚನೆ ಎನ್ನಬಹುದು. ಇಲ್ಲಿ ವರ್ಣಿತವಾಗುವುದು ಆಯಾ ದೈವಗಳ ವಿವಿಧ ನಾಮಾವಳಿಗಳು, ಗುಣವಾಚಕ ಮಾಲೆಗಳು ಇದರ ರಚನೆಗೆ ಬೇಕಾದ್ದು, ಕವಿಪ್ರತಿಭೆಗಿಂತಲೂ, ಪದಪ್ರಯೋಗ ಪಾಂಡಿತ್ಯ, ಪದ್ಯರಚನಾ ಚಾತುರ್ಯ, ಲಯಜ್ಞಾನ. ತೆಲುಗು ಕಾವ್ಯಗಳಲ್ಲಿ ಬರುವ ದಂಡಕಗಳು ಕವಿಪ್ರಣೀತವೇ? ಎಂಬ ಸಂದೇಹವೂ ನನಗಿದೆ. ಹರಿಶ್ಚಂದ್ರಕಾವ್ಯದಲ್ಲಿನ 'ಏವೆನೇವೆನೆಲೆ ಮಗನೇ ಮಗನೇ' ಎಂಬಂಥದೇ ರಗಳೆ (ಶೋಕರಗಳೆ?) ಕುಮಾರವ್ಯಾಸ ಭಾರತದ ತಾಳೆಯೋಲೆಯ ಪ್ರತಿಯೊಂದರಲ್ಲಿ ಲಭಿಸಿದೆ. ಸಂದರ್ಭವೂ ಅಂಥದ್ದೇ. ಅಭಿಮನ್ಯುವಧಾ-ಸುಭದ್ರಾಪ್ರಲಾಪ. ಇದು ಪ್ರಕ್ಷಿಪ್ತವೆಂದು ವಿದ್ವಾಂಸರಿಂದ ನಿರ್ಣೀತವಾಗಿದೆ. ಹೀಗೆ ಕವಿಗಳಲ್ಲದ, ಪದ್ಯರಚಕರೂ ಮತ್ತು ಪಂಡಿತರೂ ಹೆಚ್ಚಾಗಿ ದಂಡಕಗಳನ್ನು ರಚಿಸಿರುವುದರಿಂದ ಮತ್ತು ರಚಿಸಲು ಸಾಧ್ಯವಿರುವುದರಿಂದ ಕೆಲವು ಲಿಪಿಕಾರರು ಚಾಪಲ್ಯದಿಂದ ದಂಡಕಗಳನ್ನು ಕಾವ್ಯ ಮಧ್ಯದ ಸೂಕ್ತ ಸಂದರ್ಭಗಳಲ್ಲಿ ಸೇರಿಸಿರಬಹುದೆಂದು ಅನುಮಾನಿಸಲು ಆಸ್ಪದವಿದೆ. ಖ್ಯಾತ ಸಂಸ್ಕೃತ ಕಾವ್ಯಾದಿಗಳಲ್ಲೆಲ್ಲೂ ದಂಡಕದ ಸುಳಿವಿದ್ದಂತೆ ಇಲ್ಲ. ಸ್ತೋತ್ರ ಸಾಹಿತ್ಯದಲ್ಲಿ ಮಾತ್ರವೇ ದಂಡಕ ಕಂಡುಬರುವುದೂ ಈ ಸಂದೇಹಕ್ಕೆ ಪುಷ್ಟಿಕೊಟ್ಟಿದೆ.

ಚಮತ್ಕೃತಿಯೇ ಮೂಲೋದ್ದೇಶವಾಗುಳ್ಳ ಚಿತ್ರಕವಿತ್ವದಂಥವುಗಳ ವಿಭಾಗದಲ್ಲಿ ಸೇರುವ ದಂಡಕ— ಸ್ತೋತ್ರಕ್ಕೇ ಮೀಸಲಾಗಿರುವಿಕೆ, ಅಕ್ಷರಗಣದ ಕಠಿನ ನಿಯಮ, ಅವಿಶ್ರಾಂತ ಅಖಂಡತೆ ಮುಂತಾದ ತನ್ನದೇ ಆದ ಮಿತಿಗಳಿಂದಾಗಿ ಕ್ರಮೇಣ ಪ್ರಯೋಗಗಳನ್ನು ಕಳೆದುಕೊಂಡಿದೆ.

———

೧ 'ಕಲಾವತೀ ಪರಿಣಯ' ಕ. ಸಾ. ಪ. ಪ. ಸಂಪುಟ ೯ (ಜನವರಿ ೧೯೩೫)

ಪರಿಶಿಷ್ಟ

ದಂಡಕ	ಲಕ್ಷಣ			ಲಕ್ಷಣಕಾರರು
I ನಿರ್ದಿಷ್ಟ ಸಂಖ್ಯೆಯ ರಗಣಗಳ ಯೋಜನೆ :				
೧ ಚಂಡವೃಷ್ಟಿ ಪ್ರಯಾತ	೬ ಲಘು (೨ ನಗಣ)	+ ೭	ರಗಣಗಳು	ನಾಗವರ್ಮ + ಜಯಕೀರ್ತಿ ಮತ್ತು ಇತರರು
೨ ಅರ್ಣ	,,	+ ೮	,,	
೩ ಅರ್ಣವ	,,	+ ೯	,,	
೪ ವ್ಯಾಲ	,,	+ ೧೦	,,	
೫ ಜೀಮೂತ	,,	+ ೧೧	,,	
೬ ಲೀಲಾಕರ	,,	+ ೧೨	,,	
೭ ಉದ್ದಾಮ	,,	+ ೧೩	,,	ಜಯಕೀರ್ತಿ
೮ ಶಂಖ	,,	+ ೧೪	,,	,,
೯ ಕಂಕೇಲ್ಲಿ	೧ ನಗಣ + ೧ ಗುರು	+ ೧೩	,,	ಹೇಮಚಂದ್ರ
೧೦ ದಂಭೋಲಿ	೧ ನಗಣ	+ ೯	,,	,,
೧೧ ಪನ್ನಗ	,,	+ ೮	,,	,,
೧೨ ಭುಜಂಗ	೬ ಲಘು (೨ ನಗಣ)	+ ೧೬	,,	,,
೧೩ ಲೀಲಾವಿಲಾಸ	೧ ನಗಣ + ೧ ಗುರು	+ ೧೬	,,	,,
೧೪ ಸಮುದ್ರ	೬ ಲಘು (೨ ನಗಣ)	+ ೧೫	,,	ಉತ್ಪಲಭಟ್ಟನ ವ್ಯಾಖ್ಯಾನ
೧೫ ಹೇಲಾವಲೀ	೧ ನಗಣ + ೧ ಗುರು	+ ೧೦	,,	ಹೇಮಚಂದ್ರ

ದಂಡಕ	ಲಕ್ಷಣ	ಲಕ್ಷಣಕಾರರು
	II ಅನಿರ್ದಿಷ್ಟ ವಿವಿಧ ಅಕ್ಷರಗಣಗಳ ಯೋಜನೆ :	
೧ ಕಾಮಬಾಣ *	ಎಷ್ಟಾದರೂ ಸಂಖ್ಯೆಯ ತಗಣಗಳು + ೨ ಗುರು	ಹೇಮಚಂದ್ರ
೨ ಕುಸುಮಾಸ್ತರಣ	,, ಸಗಣಗಳು	,,
೩ ಚಂಡವೇಗ	೬ ಲಘು (೨ ನಗಣ) + ಅನಿರ್ದಿಷ್ಟ ಸಂಖ್ಯೆಯ ಯಗಣಗಳು	ಸ್ವಯಂಭೂ ಛಂದಸ್ಸು
೪ ಚಂಡಕಾಲ/ಪಾಲಾ	೫ ಲಘು + ಅನಿರ್ದಿಷ್ಟ ಸಂಖ್ಯೆಯ ರಗಣಗಳು	ಹೇಮಚಂದ್ರ
೫ ಮೇಘಮಾಲಾ	೬ ಲಘು + ೩ ಗುರು + ಅನಿರ್ದಿಷ್ಟ ಸಂಖ್ಯೆಯ ಯಗಣಗಳು	,,
೬ ಮತ್ತಮಾತಂಗ **	ಅನಿರ್ದಿಷ್ಟ ಸಂಖ್ಯೆಯ ರಗಣಗಳು	,,
೭ ಸಿಂಹವಿಕ್ರೀಡಿತ	೫ ಲಘು + ಅನಿರ್ದಿಷ್ಟ ಸಂಖ್ಯೆಯ ಯಾವುದೇ ಗಣ	,,
	III ಮಗಣ ನಗಣಗಳನ್ನುಳಿದು ಯಾವುದೇ ಗಣ ಎಷ್ಟಾದರೂ ಸಂಖ್ಯೆಯಲ್ಲಿ :	
೧ ಚಂಡ	೫ ಲಘು + ಯಾವುದಾದರೂ ಗಣ ಎಷ್ಟಾದರೂ ಸಂಖ್ಯೆಯಲ್ಲಿ	ಜಯಕೀರ್ತಿ/ಹೇಮಚಂದ್ರ
೨ ವಾತ	೭ ಲಘು + ,,	ಜಯಕೀರ್ತಿ
೩ ಅಬ್ದ	೪ ಲಘು + ,,	,,
೪ ಸಿಂಹ	೩ ಲಘು + ,,	,,

* ಉದ್ಭಟ ಕಾವ್ಯದ ದಂಡಕ

** ಜಯಕೀರ್ತಿ ಹೇಳಿರುವ ಉತ್ಸವ ದಂಡಕಕ್ಕೂ ಇದೇ ಲಕ್ಷಣ

ದಂಡಕ	ಲಕ್ಷಣ	ಲಕ್ಷಣಕಾರರು
IV ವಿಶೇಷ ಪ್ರಯೋಗಗಳು :		
೧ ಚಿತ್ರ	ಅನಿಯತ ಸಂಖ್ಯೆಯ ಚತುರ್ಮಾತ್ರಾ ಗಣಗಳಿರುವ ಪಾದಗಳು (- ನಾಲ್ಕು + ವಿಷಮ ಸ್ಥಾನದಲ್ಲಿ ಜಗಣ ಬರಬಹುದು)	ಜಯಕೀರ್ತಿ
೨ ಪ್ರಚಿತ	೬ ಲಘು + ೭ ಯಗಣಗಳು	,,
೩ ಉತ್ಸಾಹ	೮ ಬ್ರಹ್ಮಗಣ (೮ ಕ್ಕಿಂತ ಹೆಚ್ಚೂ ಇರಬಹುದು) + ಗುರು	ನಾಗವರ್ಮ
೪ ನಿಚಿತ	ತ/ಜ/ಭ ಯಾವುದಾದರೂ ಗಣಗಳು + ಗುರ್ವಂತವಾದ ನಾಲ್ಕು ಪಾದಗಳು	,,
೫ ಅನಂಗ ಶೇಖರ	ಅನಿಯತ ಸಂಖ್ಯೆಯ ಲಘು ಗುರು (∪ -)	ಹೇಮಚಂದ್ರ
೬ ಅಶೋಕ ಪುಷ್ಪಮಂಜರಿ	,, ಗುರು ಲಘು (- ∪)	,,
೭ ವರ್ಣಕ	೬ ಲಘು + ೭ ಭಗಣಗಳು + ೨ ಗುರು	ಉತ್ಪಲಭಟ್ಟನ ವ್ಯಾಖ್ಯಾನ
೮ ಉತ್ಕಾಲಿಕಾ	ನಾಲ್ಕು ಪಾದ, ನಿರಂತರವಾಗಿ ಬರುವ ಪಂಚಮಾತ್ರಾಗಣಗಳು ಗುರ್ವಂತವಾಗಿರಬೇಕು	ಹೇಮಚಂದ್ರ

ಗ್ರಂಥಋಣ

೧ ಛಂದೋಂಬುಧಿ — ಸಂಪಾದಕರು : ಶ್ರೀ ಕುಕ್ಕಿಲ ಕೃಷ್ಣಭಟ್ಟ
ಮೊದಲ ಮುದ್ರಣ – ಪ್ರಕಾಶಕರು : ಡಿ. ವಿ. ಕೆ. ಮೂರ್ತಿ, ಮೈಸೂರು – ೪.

೨ ಕನ್ನಡ ಛಂದಸ್ಸಂಪುಟ — ಸಂ : ಡಾ|| ಎಲ್. ಬಸವರಾಜು
ಮುದ್ರಣ : ೧೯೭೪.

೩ ಕನ್ನಡ ಛಂದಸ್ಸು — ಸಂ : ಟಿ. ವಿ. ವೆಂಕಟಾಚಲ ಶಾಸ್ತ್ರಿ

೪ ವೇಮುಲವಾಡ ಭೀಮಕವಿ ಕೃತ ಕವಿಜನಾಶ್ರಯಮು
ವ್ಯಾಖ್ಯಾತ : ಟಿ. ಭಾಸ್ಕರಶಾಸ್ತ್ರಿ, ಮಹತಿ ಗ್ರಂಥಮಾಲಾ, ಗುಂಟೂರು.

೫ ಅಪ್ಪಕವೀಯಮು— ಶತಾವಧಾನಿ ಸೂರ್ಯನಾರಾಯಣ ಶಾಸ್ತ್ರುಲಚೇಬರಿಷ್ಕೃತಮು
ಮುದ್ರಣ : ೧೯೧೦.

೬ ಕೇದಾರಭಟ್ಟನ ವೃತ್ತರತ್ನಾಕರ

೭ ದಂಡಕರತ್ನಮುಲು – ಪೂರ್ವಕವಿ ವಿರಚಿತಮುಲು
ಶ್ರೀ ಸತ್ಯನಾರಾಯಣ ಬುಕ್ ಡಿಪೋ, ರಾಜಮಂಡ್ರಿ.

೮ ಸೋಮರಾಜನ ಉದ್ಭಟಕಾವ್ಯ

೯ ಛಂದಸ್ಸಾರ — ಪ್ರೊ. ಲ. ನ. ಮುಳುಬಾಗಿಲು, ೮ನೇ ಮುದ್ರಣ
ಸಮಾಜ ಪುಸ್ತಕಾಲಯ, ಧಾರವಾಡ.

೧೦ ಕರ್ನಾಟಕ ಹರಿದಾಸ ಸಾಹಿತ್ಯ — ಆರ್. ಎಸ್. ಪಂಚಮುಖಿ
ಮುದ್ರಣ : ೧೯೫೨.

೧೧ ಸಂಶೋಧನ ಪಂಚದಶಿ — ಭೀಮರಾವ್ ಚಿಟಗುಪ್ಪಿ

೧೨ ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಸಾಹಿತ್ಯದ ಪ್ರಭಾವ
—ಎಸ್. ಅನಂತನಾರಾಯಣ (ಮೊದಲ ಮುದ್ರಣ)

೧೩ ಕವಿಚರಿತ್ರೆ — ಆರ್. ನರಸಿಂಹಾಚಾರ್ಯ (೩ನೇ ಸಂಪುಟ)

೧೪ ಯಾದವಕವಿಯ ಕಲಾವತೀಪರಿಣಯ
ಪ್ರಥಮ ಮುದ್ರಣಪ್ರತಿ (೧೮೭೭) ಕೃಪೆ : ಶ್ರೀ ಆರ್. ಎಸ್. ರಾಮರಾವ್, ಕನ್ನಡ ಸಾಹಿತ್ಯ ಪರಿಷತ್ತು.

೧೫ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ
—ಸಂಪುಟ ೯ (ಜನವರಿ ೧೯೨೫)

೧೬ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ
—ಸಂಪುಟ ೬೧ ಸಂಚಿಕೆ ೧ (ಜೂನ್ ೧೯೭೬)

೧೭ ಸಹ್ಯಾದ್ರಿ— ಕುವೆಂಪು ಅವರ ಅಭಿನಂದನ ಗ್ರಂಥ.

ಪರಿಷತ್ಪತ್ರಿಕೆ ಮೇಲಚ್ಚು–೧೯೭೭
ಸಂಪುಟ ೬೨ ; ಸಂಚಿಕೆ ೧–೨